ಶ್ರೀ ರಮಣಮಹರ್ಷಿ ಮತ್ತು ಶ್ರೀ ದೈವರಾತರು

'ಶ್ರೀ ರಮಣ ಗೀತೆ' ಎಂಬ ಚಿಕ್ಕ ಅನುಭವ ವೇದಾಂತ ಗ್ರಂಥ ಪ್ರಸಿದ್ಧವಿದೆ. ಅದರಲ್ಲಿಯ ಪ್ರಥಮ ಶ್ಲೋಕ ಹೃದಯ ಕುಹರ ಮಧ್ಯೆ... ಎಂಬುದೊಂದೇ ಶ್ರೀ ರಮಣಮಹರ್ಷಿಗಳುಸಂಸ್ಕೃತದಲ್ಲಿ ಹೇಳಿದ ಮಂತ್ರ, ಉಳಿದ ಎಲ್ಲ ಮಾತುಗಳನ್ನು ಅವರು ತಮಿಳಿನಲ್ಲಿ ನುಡಿದರು. ಅವುಗಳನ್ನು ಕಾವ್ಯಕಂಠ ಗಣಪತಿ ಮುನಿಗಳು ಸಂಸ್ಕೃತದಲ್ಲಿ ಪರಿವರ್ತಿಸಿದರು. ಅದೇ ಈಗಿನ ರಮಣಗೀತೆ.

ಅದರಲ್ಲಿ ಶ್ರೀ ದೈವರಾತರು ಕೇಳಿದ ಪ್ರಶ್ನೆಗಳು ಹಾಗೂ ಅವುಗಳ ಉತ್ತರಗಳೂ ಇವೆ.


ಶ್ರೀ ದೈವರಾತರು ಶ್ರೀ ರಮಣ ಮಹರ್ಷಿಗಳನ್ನು ಕಂಡು ಅತ್ಯಂತ ಮುಗ್ಧರಾದರು. ಅವರ ಚಿತ್ ಸ್ಥಿತಿ ನೋಡಿ ಆಶ್ಚರ್ಯಚಕಿತರಾದರು. ಅವರನ್ನು ಕುರಿತು ಶ್ರೀ ದೈವರಾತರು ಸುಂದರವಾದ ಹದಿನೈದು ಸಂಸ್ಕೃತ ಶ್ಲೋಕಗಳನ್ನು ಬರೆದಿರುವರು. ಅವುಗಳಲ್ಲಿಯ ಒಂದೇ ಒಂದು ಮಾತನ್ನು ಇಲ್ಲಿ ಹೇಳಿದರೆ ಶ್ರೀ ದೈವರಾತರ ಗಂಭೀರ ದೃಷ್ಟಿ ಹಾಗೂ ಮಹರ್ಷಿಗಳ ಸಿದ್ಧಾರೂಢ ಸ್ಥಿತಿ ಇವುಗಳನ್ನು ಏಕಕಾಲಕ್ಕೆ ಹೇಳಿದಂತೆ ಆಗುವದು.

ಶ್ರೀ ರಮಣ ಮಹರ್ಷಿಗಳನ್ನು ನೋಡಿದಾಗ... ಸಂವಿತ್ ಏವ ಅವಶಿಷ್ಟ: ದೇಹ-ಪ್ರಾಣ-ಮನಸಾದಿಗಳ ಸಕಲ ಉಪಾಧಿಗಳನ್ನು ನೀಗಿನಿಂತ ಶುದ್ಧ ಬುದ್ಧ-ಸಿದ್ಧ-ಮುಕ್ತ ಚಿತ್ ಶಕ್ತಿಯಂತೆ ಹೊಳೆದರು. ಶ್ರೀ ದೈವರಾತರಿಗೆ !

....ಸೇವಯಾ

ಗುರುಗಳ ಅನುಗ್ರಹ ಆಗಬೇಕಾದರೂ ಗುರು ಶಿಷ್ಯ ಸಂಬಂಧ ವಿಶಿಷ್ಟ ತರಹದ್ದು ಇರಬೇಕಾಗುವದು. ಗೀತೆಯಲ್ಲಿ...ಪ್ರರಿಪ್ರಶ್ನೇನ ಸೇವಯಾ ಎಂಬ ಸಂದರ್ಭ ಬಂದಿದೆ. ಜ್ಞಾನವಾಗಬೇಕಾದರೆ ಅದಕ್ಕೆ ಯಾವದೊಂದು ರೀತಿ ಮಾರ್ಗ ಬೇಕು. ನೀವು ಯಾವ ಮಾರ್ಗವನ್ನು ಅವಲಂಬಿಸಿದಿರಿ ಎಂದು ಕೇಳಲು ಶ್ರೀ ದೈವರಾತರು ಅಪಾರ ಶ್ರದ್ಧೆ ಹಾಗೂ ಅನನ್ಯ ಸೇವೆ ಇದೇ ನನ್ನ ಮಾರ್ಗ ಎಂದು ಹೇಳಿದರು.

ಟೇಂಬೇ ಮಹಾರಾಜರಲ್ಲಿರುವಾಗ ಅವರು ಮುಖ್ಯವಾಗಿ ಅಡಿಗೆ ಭಟ್ಟರಾಗಿ ಸೇವೆ ಮಾಡಿದರು. ಅವರ ಮೂಲ ಹೆಸರು ಗಜಾನನ. ನಾನು ಅಡಿಗೆ ಮನೆ ಸಂಭಾಳಿಸುತ್ತಿರುವದರಿಂದ ಮಹಾರಾಜರು ನನಗೆ ಗಜಾತಾಯಿ ಎಂದು ಕರೆಯುತ್ತಿದ್ದರು



ಎಂದು ಒಮ್ಮೆ ಶ್ರೀ ದೈವರಾತರು ಹೇಳಿದರು; ತಮಗೆ ದೈವರಾತ ಎಂಬ ಹೆಸರುಕೊಟ್ಟವರು ಗುರುಗಳಾದ ಶ್ರೀ ವಾಸಿಷ್ಠ ಗಣಪತಿ ಮುನಿಗಳುಎಂದರು.

"ಶ್ರದ್ಧಸ್ವ" ಎಂಬ ಉಪನಿಷತ್ತಿನ ಆದೇಶ ಶ್ರದ್ಧಾಮಯೋಯಂ ಪುರುಷಃ ಎಂಬ ವಾಕ್ಯಯೋಯತ್ ಶ್ರದ್ಧಃಸ ಏವಸಃ ಎಂಬ ನುಡಿ ಇವುಗಳ ಸತ್ಯತೆ ಶ್ರೀ ದೈವರಾತರಂಥವರ ಜೀವನದಿಂದ ಸಿದ್ಧವಾಗುವದು.

ಗುರುಗಳ ಅನುಗ್ರಹ

ಈ ಹೊಸ ಋಗ್ವೇದ ಮಂತ್ರದರ್ಶನ, ಈ ಅಗಾಧವಾದ ಸ್ಮರಣ ಶಕ್ತಿ ಮಂತ್ರಗಳ ಗೂಢಾರ್ಥವನ್ನು ವಿವರಿಸುವ ಯೋಗ್ಯತೆ, ಯೋಗ-ಯಂತ್ರ-ತಂತ್ರ ಜ್ಯೋತಿಷ, ಆಯುರ್ವೇದ ಇತ್ಯಾದಿಗಳ ಜ್ಞಾನ ಇವೆಲ್ಲವುಗಳನ್ನು ನೀವು ಹೇಗೆ ಮತ್ತು ಎಲ್ಲಿ ದೊರಕಿಸಿದಿರಿ ಎಂದು ನಾನೊಮ್ಮೆ ಶ್ರೀ ದೈವರಾತರನ್ನು ಕೇಳಿದೆನು. ಅಲ್ಲದೆ ಎಂಬತ್ತೆರಡು ವರುಷಗಳ ವಯಸ್ಸಿನಲ್ಲಿ ಈ ಉತ್ಸಾಹ ಈ ಬಾಲಸ್ವಭಾವ ಇವುಗಳ ರಹಸ್ಯವೇನು ಎಂದಾಗ ಅವರು ಒಂದೇ ಉತ್ತರವನ್ನು ಕೊಟ್ಟರು ಗುರುಗಳ ಅನುಗ್ರಹ. ಇವು ಗಳನ್ನೆಲ್ಲ ನಾನು ಅಭ್ಯಾಸ ಮಾಡಿ ಕಲಿಯುತ್ತ ಕುಳಿತಿದ್ದರೆ. ಒಂದೇ ಜನ್ಮ ಸಾಲುತ್ತಿರಲಿಲ್ಲ. ನಾನು ಅಂಥ ಅಭ್ಯಾಸಿಯೂ ಅಲ್ಲ. ನನ್ನ ಏಕಮೇವ ಮಹಾ ಗುರುಗಳು ಶ್ರೀ ಕಾವ್ಯಕಂಠ ವಾಸಿಷ್ಠ ಗಣಪತಿ ಮುನಿಗಳು. ಆದರೆ ಟೇಂಬೇ ಮಹಾರಾಜರು ಯೋಗ, ಆಯುರ್ವೇದ ಮುಂತಾದವುಗಳ ವಿಷಯದಲ್ಲಿ ಮಾಡಿದ ಉಪಕಾರ ಅಷ್ಟಿಷ್ಟಲ್ಲ. ರಮಣ ಮಹರ್ಷಿ ಗಳ ಕೃಪಾದೃಷ್ಟಿಯೂ ನನ್ನ ಮೇಲೆ ಇತ್ತು ಎಂದು ಹೇಳಬಲ್ಲೆ.

★ ಬ್ರಹ್ಮರ್ಷಿ ದೈವರಾತರ ಭಾಷಾಜ್ಞಾನ

ವಾಕ್ ಏವ ಬ್ರಹ್ಮಾ" ಎಂಬ ಉಕ್ತಿಯಲ್ಲಿ ಬ್ರಹ್ಮರ್ಷಿ ದೈವರಾತರು ಸಂಪೂರ್ಣ ಶ್ರದ್ಧೆಯನ್ನಿಟ್ಟರುವರು. ವಾಕ್ ಎಂಬುದೇ ಜ್ಞಾನದ ಮೂಲ ಜ್ಞಾನದ ಜ್ಞಾನ ಕೂಡ ವಾಕ್ ಶಕ್ತಿಯಮೂಲಕವೇ ಆಗಬಲ್ಲದು ! ಜ್ಞಾನದ ವಿಕಾಸ, ಪ್ರಸಾರ ಇವುಗಳಿಗೂ ವಾಕ್ ಶಕ್ತಿಯೇ ಸಾಧನ. "ವಾಕ್ ಸುಧಾ" ಎಂಬ ತಮ್ಮ ಸಂಸ್ಕೃತ ಗ್ರಂಥದಲ್ಲಿ ವಾಕ್ ಇದರ ಪರ್ಯಾಯ ಶಬ್ದಗಳು ವೇದದಲ್ಲಿ ಐವತ್ತೇಳು ಸ್ಥಳಗಳಲ್ಲಿ ಬಂದಿವೆ ಎಂದು ವಿವರಿಸಿದ್ದಾರೆ, ಹಾಗೂ ಅವುಗಳ ಅರ್ಥಗಳನ್ನು ವಿಶದೀಕರಿಸಿದ್ದಾರೆ ದೈವರಾತರು.

ಸಂಸ್ಕೃತ ಭಾಷೆ, ಆ ಭಾಷೆಯಲ್ಲಿ ಗದ್ಯ-ಪದ್ಯ ರಚನೆ, ಭಾಷಣ ಇವು ಶ್ರೀ ದೈವರಾತರಿಗೆ ಕರತಲಾಮಲಕವತ್ ಇರುವವು. ಕನ್ನಡವಂತೂ ಅವರ ಮಾತೃಭಾಷೆ. ಇದಲ್ಲದೆ ತೆಲುಗು, ತಮಿಳು ಹಿಂದೀ, ಮರಾಠಿ ಈ ಭಾಷೆಗಳನ್ನು ಚೆನ್ನಾಗಿ ಬಲ್ಲರು. ಸಂಸ್ಕೃತ, ಕನ್ನಡ, ಹಿಂದೀ ಭಾಷೆಗಳಲ್ಲಿ ಅವರು ಪ್ರವಚನ ಮಾಡಬಲ್ಲರು: ತೆಲುಗು ಅವರ ಗುರುಗಳಾದ ಶ್ರೀ ವಾಸಿಷ್ಠ ಗಣಪತಿ ಮುನಿಗಳ ಭಾಷೆ ಅವರ ಗುರುಗಳಾದ ರಮಣ ಮಹರ್ಷಿಗಳ ಭಾಷೆ ತಮಿಳು, ಹಲವಾರು ವರುಷ ಕಾಶೀ ಕ್ಷೇತ್ರದಲ್ಲಿ ಕಳೆದುದರಿಂದ ಹಿಂದೀ ಅವರಿಗೆ ಒಳ್ಳೆ ಪರಿಚಿತ ಭಾಷೆ. ನೇಪಾಳದಲ್ಲಿ ಎರಡು ವರ್ಷ ಇದ್ದಾಗ ಆ ಭಾಷೆಯನ್ನು ಕಲಿತು ಒಂದು ಚಿಕ್ಕ ಗ್ರಂಥವನ್ನು ಬರೆದಿರುವರು.

ಅವರಿಗೆ ಬಾರದೆ ಇದ್ದ ಭಾಷೆ ಇಂಗ್ಲೀಷ್. ಒಂದು ರೀತಿ ಶುದ್ಧ ವೈದಿಕ ಪರಂಪರೆ, ಸಂಸ್ಕೃತ ಸಂಸ್ಕೃತಿ ಇವುಗಳನ್ನು ಉಳಿಸಿಕೊಳ್ಳಲು ಅವರಿಗೆ ಇಂಗ್ಲೀಷದ ಅಜ್ಞಾನ ಸಹಾಯ ಮಾಡಿದೆ ಎಂದು ಹೇಳಬಹುದು! ಆದರೆ ಲೌಕಿಕ ದೃಷ್ಟಿಯಿಂದ ಅವರಿಗೆ ಈ ಅಜ್ಞಾನದಿಂದ ಬಹಳ ಹಾನಿ ಆಗಿದೆ ಎಂದರೆ ತಪ್ಪಾಗಲಿಕ್ಕಿಲ್ಲ. ಈಚೆಗೆ ಇಂಗ್ಲೀಷನ್ನು ಸಂದರ್ಭದಿಂದ ತಿಳಿದುಕೊಳ್ಳುವ ಶಕ್ತಿ ಅವರಲ್ಲಿ ಉಂಟಾಗಿದೆ ! ಅವರ ಭಾಷಣದ ಅಥವಾ ಲೇಖನದ ಇಂಗ್ಲೀಷ್ ಭಾಷಾಂತರದಲ್ಲಿ ಏನಾದರೂ ತಪ್ಪಾದರೆ ಅದನ್ನು ಅವರು ಕಂಡುಹಿಡಿಯಬಲ್ಲರು !

ಶ್ರೀ ರಾಜೇಂದ್ರಪ್ರಸಾದರು ಹಾಗೂ ಶ್ರೀ ದೈವರಾತರು

ಮುಂದೆ ರಾಜೇಂದ್ರಪ್ರಸಾದರು ಭಾರತೀಯ ಗಣತಂತ್ರದ ಅಧ್ಯಕ್ಷರಾದ ಬಳಿಕ ಅವರ ಹಾಗೂ ಶ್ರೀ ದೈವರಾತರ ಸಂಬಂಧ ಹೆಚ್ಚು ಘನಿಷ್ಠ ಆಯಿತು. ದಿಲ್ಲಿಗೆ ಹೋದಾಗ ಅನೇಕ ಸಾರೆ ದೈವರಾತರು ರಾಷ್ಟ್ರಪತಿ ಭವನದಲ್ಲಿಯೇ ಉಳಕೊಳ್ಳುತ್ತಿದ್ದರು. ಗೀತೆ ಉಪನಿಷತ್ತು ಮುಂತಾದವುಗಳ ಬಗ್ಗೆ ಅಧ್ಯಕ್ಷರಿಗೆ ತಿಳುವಳಿಕೆ ನೀಡುತ್ತಿದ್ದರು. ತಾವು ಸಂಸ್ಕೃತ ಅಭ್ಯಾಸ ಚೆನ್ನಾಗಿ ಮಾಡಲಿಲ್ಲ ಎಂಬ ಬಗ್ಗೆ ಅಧ್ಯಕ್ಷರಿಗೆ ಖೇದ ಎನ್ನಿಸುತ್ತಿತ್ತು.

ಶ್ರೀ ದೈವರಾತರ ಆಶ್ರಮಾದಿಗಳನ್ನು ನೋಡಬೇಕೆಂಬ ಕುತೂಹಲ ಹಾಗೂ ಪೂಜ್ಯಭಾವ ಇವುಗಳ ಮೂಲಕ ಅಧ್ಯಕ್ಷರು ಗೋಕರ್ಣಕ್ಕೆ ಹೋಗಿದ್ದರು. ಆಗ ಅಲ್ಲಿ ಸಂಸ್ಕೃತ ಪಂಡಿತರ ಸಭೆಯೂ ಕೂಡಿತು. ಅಧ್ಯಕ್ಷರು ದೇವಧರ್ಮಗಳಲ್ಲಿ ಒಳ್ಳೆ ಶ್ರದ್ಧೆಯನ್ನಿಟ್ಟುಕೊಂಡಿದ್ದರು. ಭಾರತೀಯ ಸಂಸ್ಕೃತಿಯ ಬಗ್ಗೆ ಅವರಲ್ಲಿ ಒಳ್ಳೆ ಅಭಿಮಾನ ಹಾಗೂ ಆಸ್ಥೆ ಇದ್ದಿತು. ಗೋಕರ್ಣದ ಮಹಾಬಳೇಶ್ವರ ದೇವಸ್ಥಾನಕ್ಕೆ ಭೇಟ್ಟಿಕೊಟ್ಟು ಅವರು ತೀರ್ಥ ಪ್ರಸಾದ ಮಂತ್ರಾಕ್ಷತೆಗಳನ್ನು ಭಕ್ತಿ ಪೂರ್ವಕವಾಗಿ ಸ್ವೀಕರಿಸಿದರು.

ಡಾ. ರಾಜೇಂದ್ರಪ್ರಸಾದರು ಅಧ್ಯಕ್ಷರಾಗುವ ಮುನ್ನ ಶ್ರೀ ದೈವರಾತರನ್ನು ನಾಸಿಕ್ ಕ್ಷೇತ್ರದಲ್ಲಿ ಕಂಡಿದ್ದರು. ಆ ಸಂಗತಿಯನ್ನು ಅವರು ತಮ್ಮ ಆತ್ಮಕಥೆಯಲ್ಲಿ ಒಂದೂವರೆ ಪುಟದಷ್ಟು ಕೊಟ್ಟಿದ್ದಾರೆ. ಅವರ ಸದ್ಗುಣಗಳನ್ನು ಪಾಂಡಿತ್ಯವನ್ನು ಬಣ್ಣಿಸಿ ಬರೆದಿದ್ದಾರೆ.

ಹಲವು ಸಾರೆ ಡಾ. ರಾಜೇಂದ್ರರು ನನ್ನೊಡನೆ ಶ್ರೀ ದೈವರಾತರ ಪ್ರಸ್ತಾಪವನ್ನು ಎತ್ತಿ ಅವರ ಪುಸ್ತಕಗಳ ಪ್ರಕಟನೆ ಕುರಿತು ಚರ್ಚಿಸುತ್ತಿದ್ದರು. ಆಗ ಅವರು ನನಗೆ ಒಮ್ಮೆ ಶ್ರೀ ದೈವರಾತರ ಯೋಗಸಾಧನೆಯ ಬಗ್ಗೆ ಹೇಳುತ್ತಿರುವಾಗ ತಮಗೆ ಅವರು ವಜ್ರೋಲಿ ಕ್ರಿಯೆ ಮಾಡಿ ತೋರಿಸಿದರು ಎಂದು ಆಶ್ಚರ್ಯಪೂರಿತರಾಗಿ ಹೇಳಿದರು !

ಶ್ರೀ ದೈವರಾತರ ಎಲ್ಲ ಸಂಸ್ಕೃತ ಗ್ರಂಥಗಳು ಪ್ರಕಟವಾಗಬೇಕೆಂದು ಡಾ. ರಾಜೇಂದ್ರಪ್ರಸಾದರು ಇಷ್ಟಪಟ್ಟಿದ್ದರು. ಅವರು ಶ್ರೀ ದೈವರಾತರೊಡನೆ ಬಹಳ ನಮ್ರಭಾವದಿಂದ ನಡೆದುಕೊಳ್ಳುತ್ತಿದ್ದರು. ಶ್ರೀ ದೈವರಾತರು ಅವರನ್ನು ಒಮ್ಮೆ ಜಗದ್ಗುರು ಶ್ರೀ ಶೃಂಗೇರಿಮಠಕ್ಕೂ ಕರೆದೊಯ್ದು ಭೇಟಿ ಮಾಡಿಸಿದ್ದರು. ಅವರ ಅನ್ಯೋನ್ಯ ಸಂಬಂಧ ಬಹಳ ಆತ್ಮೀಯವಾಗಿತ್ತು.

ಬ್ರಹ್ಮರ್ಷಿ ದೈವರಾತರ ಬದುಕಿನ ಶ್ರೀಮಂತಿಕೆ

ಋಗ್ವೇದವನ್ನು ಸಂಪೂರ್ಣವಾಗಿ ಪಠಿಸುವ ಹದಿನಾರು ದಿನಗಳ ಸಮಾರಂಭವು ನಮಗೆ ಪ್ರಾಪ್ತವಾಗಿದೆ. ಇದೊಂದು ಅಪೂರ್ವ ಅವಕಾಶ. ನಾವು ಸೆಪ್ಟೆಂಬರ್ ಮೊದಲ ತಾರೀಖು ವಿಶ್ವಯೋಜನೆಯನ್ನು ಕಾರ್ಯಗತಗೊಳಿಸಲು ಆರಂಭಿಸುವ ಸಂದರ್ಭದಲ್ಲಿ ಭಾರತದ ಅತ್ಯುತ್ತಮ ವೇದ ಪಾರಂಗತರು ನಮ್ಮೊಡನಿರುವುದು ಮತ್ತು ಅವರು ನಮಗೆ ಋಗ್ವೇದವನ್ನು ದಯಪಾಲಿಸಲು ಪ್ರೇರಿತವಾಗಿರುವುದು ನಮ್ಮ ಭಾಗ್ಯ. ಸೆಪ್ಟೆಂಬರ್ ಮೊದಲನೆಯ ತಾರೀಖು ಈ ಹದಿನಾರು ದಿನಗಳ ಮಧ್ಯೆ ಬರುತ್ತದೆ. ವಿಶ್ವ ಯೋಜನೆಯನ್ನು ಕಾರ್ಯಗತಗೊಳಿಸುವ ಯೋಚನೆ ಮಾಡುತ್ತಿರುವುದೇ ನಾನು ಕೃತಕೃತ್ಯನಾದಂತೆ

(ಋಗ್ವೇದ ಧ್ವನಿಮುದ್ರಣ ಮಾಡಿಕೊಳ್ಳುವ ಮುನ್ನ ದಿನಾಂಕ ೨೪–೮–೧೯೭೨ ರಂದು ಅಮೇರಿಕೆಯ ಹಂಬೋಲ್ಟ್‌ನಲ್ಲಿ ಮಹರ್ಷಿ ಮಹೇಶ ಯೋಗಿಗಳು ಮಾಡಿದ ಆರಂಭ ಭಾಷಣದಿಂದ)

ಮಾಡಿದೆ. ಮುಂದುವರಿದ ನಾಗರಿಕತೆಯ, ಮಾನವ ವಿಕಾಸದ ಈ ಘಳಿಗೆಯಲ್ಲಿ ಪ್ರತಿ ಹತ್ತು ಲಕ್ಷ ಜನರಿಗೆ ಒಂದರಂತೆ ೩೬೦೦ ಕೇಂದ್ರಗಳನ್ನು ತೆರೆಯುವ ಆಶೆ ವಿಶ್ವಯೋಜನೆಗಿದೆ. ಪ್ರತಿಯೊಬ್ಬನಿಗೂ ಬೋಧೆಯಾಗಿ, ವಿಕಾಸದ ಮೌಲ್ಯಗಳ ಬಗ್ಗೆ ಅಂತರದೃಷ್ಟಿ ಲಭ್ಯವಾಗಿ ವೈಯಕ್ತಿಕ ಬದುಕು ಮಹತ್ತರ ಪರಿಪೂರ್ಣತೆಯತ್ತ ಸಾಗಲು ಅನುವಾಗುವಂತೆ ಜಗತ್ತಿನ ಎಲ್ಲ ಭಾಗಗಳಲ್ಲಿ ಸೃಜನಾತ್ಮಕ ಬುದ್ಧಿಕರಾದ ವಿಜ್ಞಾನದ ಶಿಕ್ಷಕರನ್ನು ತರಬೇತಿಗೊಳಿಸುವುದು ಕೇಂದ್ರ ಕಾರ್ಯ ಚಟುವಟಿಕೆಯಾಗಿದೆ.

ಕೃಪೆ

ದಲ್ಲಿ ಮತ್ತಷ್ಟು ಚೈತನ್ಯ ಹರಿದಾಡಲು ಇದು ಆವಶ್ಯವೆಂದು ಅವರ ಅಭಿಮತ. ಇದಕ್ಕೆ ಸಮವಾಗಿ ಸಾಮವೇದ ಪಂಡಿತರು ಇಲ್ಲಿಗೆ ಬಂದುದೂ ನಮ್ಮ ಭಾಗ್ಯ. ಬ್ರಹ್ಮರ್ಷಿಗಳಿಂದ ಸ್ಫುರಣಗೊಳ್ಳುವ ವಿವೇಕ ಚೈತನ್ಯ

ಮಹರ್ಷಿ ಮಹೇಶಯೋಗಿ

ದಾಯಿಯಾದುದು. ಬದುಕಿನ ಪೂರ್ಣತೆ ಶ್ರೀಮಂತವಾದುದು. ಈ ವೇದ ಜ್ಞಾನವನ್ನು ಅನ್ವಯಿಸಿ ಅತೀಂದ್ರಿಯ ಧ್ಯಾನದ ಮೂಲಕ ಬದುಕು ಪೂರ್ಣ ಬದುಕು ಆಗುವಂಥ ಪ್ರಜ್ಞೆಯ ಮಟ್ಟವನ್ನು ಬೆಳೆಸಿಕೊಂಡಲ್ಲಿ ಬದುಕಿನ ಕ್ಷಣ ಕಳವಳಿಸುವ ಎಲ್ಲದಕ್ಕೂ ಪೂರ್ಣತ್ವದ ಮೌಲ್ಯ ಲಭ್ಯವಾಗುತ್ತದೆ. ಈಗ ಋಗ್ವೇದ ಪಠಣ ಆಲಿಸುವ ಕಾಲ, ಈ ಕ್ಷಣದಲ್ಲಿ ಕೃತಕೃತ್ಯ ಭಾವನೆ ಮೂಡಿದೆ, ಗುರುದೇವರ ಮತ್ತು ನಮ್ಮ ಸಂಪ್ರದಾಯದ ಆಶೀರ್ವಾದ ನನ್ನ ಪ್ರಯತ್ನಗಳನ್ನು ತುಂಬಿ ಈ ಜ್ಞಾನದಿಂದ ನಾನು ಭವಿಷ್ಯ ಜಗತ್ತನ್ನು ಉಜ್ವಲವಾಗಿ ಕಾಣುತ್ತಿದ್ದೇನೆ. ನಾನು ಈಗ, ವೇದಗಳ ಆಶೀರ್ವಚನವನ್ನು ನಮಗೆ ದಯಪಾಲಿಸಬೇಕೆಂದು ಬ್ರಹ್ಮರ್ಷಿಗಳನ್ನು ಕೇಳಿಕೊಳ್ಳುತ್ತೇನೆ. ದೈವರಾತರು, "ಓಂ ಭದ್ರನ್ನೊ ಅಪಿವಾತಾಯಮನಃ ಓಂ ಶಾಂತಿ ಶಾಂತಿ ಶಾಂತಿಃ"

ಸಾಕ್ಷಾತ್ಕಾರ ಯೋಗಸುಧಾ

ಶ್ರೀ ದೈವರಾತರ 'ಛಂದೋದರ್ಶನ' ಎಂಬ ಹೊಸ ಋಗ್ವೇದಿಕ ಮಂತ್ರ ಗ್ರಂಥದ ತರುವಾಯ 'ಮೂಲ ಯಜುರ್ವೇದ' ಎಂಬ ಅವರ ವೈದಿಕ ಗ್ರಂಥವು ಅತೀವ ಮಹತ್ವದ್ದು. ಅವರ ಅಗಾಧವಾದ ಸಂಶೋಧಕ ಶಕ್ತಿಯ ಆವಿರ್ಭಾವವು ಆ ಗ್ರಂಥದಲ್ಲಿ ಕಂಡುಬರುವುದು.

ಯಾಗಿ, ವಿಕಾಸದ ಮೌಲ್ಯಗಳ ಬಗ್ಗೆ ಅಂತರದೃಷ್ಟಿ ಲಭ್ಯವಾಗಿ ವೈಯಕ್ತಿಕ ಬದುಕು ಮಹತ್ತರ ಪರಿಪೂರ್ಣತೆಯತ್ತ ಸಾಗಲು ಅನುವಾಗುವಂತೆ ಜಗತ್ತಿನ ಎಲ್ಲ ಭಾಗಗಳಲ್ಲಿ ಸೃಜನಾತ್ಮಕ ಬೌದ್ಧಿಕರಾದ ವಿಜ್ಞಾನದ ಶಿಕ್ಷಕರನ್ನು ತರಬೇತಿಗೊಳಿಸುವುದು ಕೇಂದ್ರ ಕಾರ್ಯ ಚಟುವಟಿಕೆಯಾಗಿದೆ.

ಕೃಪೆ

ನಮಗೆ ಪ್ರಿಯರಾದ ಬ್ರಹ್ಮರ್ಷಿ ದೈವರಾತರ ಕೃಪೆಯಿಂದ ಇದೆಲ್ಲ ದೊರಕುವಂತಾಗಿದೆ. ಆಧುನಿಕ ವಿಜ್ಞಾನದ ಬೆಳಕಿನಲ್ಲಿ ವೇದಗಳ ಮೇಲೆ ಭಾಷ್ಯ ಬರೆಯುವ ಅಭಿಲಾಷೆಯನ್ನು ಎರಡು ವರ್ಷಗಳ ಹಿಂದೆ ಭಾರತದ ಪತ್ರಿಕೆಗಳಲ್ಲಿ ನಾನು ವ್ಯಕ್ತಪಡಿಸಿದಾಗ ನಮ್ಮ ಆಂದೋಲನದ ಹಿತೈಷಿಗಳಲ್ಲೊಬ್ಬರಾದ ಶ್ರೀ ಆರ್. ಆರ್. ದಿವಾಕರ್ ಅವರು ಬ್ರಹ್ಮರ್ಷಿ ದೈವರಾತರ ಹೆಸರನ್ನು ಸಲಹೆ ಮಾಡಿದರು.

ಭಾರತ ವಿದ್ವಾಂಸರಲ್ಲಿ ಅವರು ಸುವಿಖ್ಯಾತರಾದರೂ ಸಾಮಾನ್ಯ ಜನತೆಗೆ ಅಪರಿಚಿತರು. ತಕ್ಷಣ ನಾನು ಅವರಿಗೆ ಹೇಳಿಕಳುಹಿಸಿದೆ. ಹೃಷಿಕೇಶದ ಶಂಕರಾಚಾರ್ಯ ನಗರಕ್ಕೆ ಅವರು ಬರುವ ಕೃಪೆ ಮಾಡಿದರು. ಅವರನ್ನು ನೋಡಿದಾಗ ವಶಿಷ್ಠರೇ ನನ್ನ ಬಳಿಗೆ ಬರುತ್ತಿರುವಂತೆ ಆಯಿತು. ವೇದಕಾಲದ ಋಷಿಯೊಬ್ಬರು ಶಂಕರಾಚಾರ್ಯ ನಗರದ ಗಂಗಾದ ದಡದಲ್ಲಿ ಕಾಣಿಸಿಕೊಂಡಷ್ಟು ಆನಂದದಾಯಕವಾಗಿತ್ತು ಆ ದೃಶ್ಯ. ಇನ್ನು ಮುಂದೆ ನಾನು ಇರಬೇಕಾದ ವಾತಾವರಣ ಇದೇ ಎಂದು ಆ ಕ್ಷಣದಲ್ಲಿ, ಅವರೊಂದಿಗೆ ಮಾತುಕತೆ ಕೂಡ ಆಡದೇ ನಿರ್ಧರಿಸಿಬಿಟ್ಟೆ.

ಸದವಕಾಶ

ತಮ್ಮ ಸಾಮೀಪ್ಯದ ಸದವಕಾಶವನ್ನು ಅವರು ನನಗೆ ಕಳೆದ ಒಂದು ವರ್ಷದಿಂದಲೂ ಒದಗಿಸಿಕೊಟ್ಟಿದ್ದಾರೆ. ಆಂದೋಲನದ ವ್ಯಾಪ್ತಿ ಮತ್ತು ನಾವು ವಹಿಸಬೇಕಾದ ಪಾತ್ರವನ್ನು ಅವಲೋಕಿಸಿದ ಅವರು, ತಮ್ಮ ಮಟ್ಟದಲ್ಲಿ, ತಮ್ಮ ಸ್ವಗೃಹದಿಂದ ತಮ್ಮ ಮಗ ಸೋಮಶ್ರವಸ್ ಅವರನ್ನು ಕರೆಸಿಕೊಂಡರು. ಸಂಪೂರ್ಣ ಋಗ್ವೇದ ಪಠಣ ಆಗುವುದು ಒಳಿತೆಂಬುದು ಅವರ ನಿರ್ಧಾರ. ನಮ್ಮ ಸುಪ್ತ ತಿಳಿವಳಿಕೆ ಪುಳಕಿತವಾಗಿ ವಿಶ್ವವ್ಯಾಪಿ ಚಟುವಟಿಕೆಯ ಕೇಂದ್ರ

ಸಾಕ್ಷಾತ್ಕಾರ ಯೋಗಸುಧಾ

ಶ್ರೀ ದೈವರಾತರ 'ಛಂದೋದರ್ಶನ' ಎಂಬ ಹೊಸ ರಿಗ್ವೇದಿಕ ಮಂತ್ರ ಗ್ರಂಥದ ತರುವಾಯ 'ಮೂಲ ಯಜುರ್ವೇದ' ಎಂಬ ಅವರ ವೈದಿಕ ಗ್ರಂಥವು ಅತೀವ ಮಹತ್ವದ್ದು. ಅವರ ಅಗಾಧವಾದ ಸಂಶೋಧಕ ಶಕ್ತಿಯ ಆವಿರ್ಭಾವವು ಆ ಗ್ರಂಥದಲ್ಲಿ ಕಂಡುಬರುವುದು. ಅದು ಬನಾರಸ್ ಹಿಂದು ಯೂನಿವರ್ಸಿಟಿಗೆ ಪ್ರಕಟಣೆಗಾಗಿ ಕೊಡಲಾಗಿದೆ. ಅದು ಪ್ರಕಟವಾದಾಗಲೆ ಪ್ರಕಟವಾಯಿತು ಎಂದು ಹೇಳುವ ಪರಿಸ್ಥಿತಿಯಿಲ್ಲದೆ! ಅಷ್ಟೊಂದು ಅದರ ಪ್ರಕಟಣೆ ಅನಿಶ್ಚಿತವಾಗಿದೆ. ಅದರಲ್ಲಿ ಎಂಟು ಸಾವಿರ ಮಂತ್ರಗಳಿವೆ!

ಅದರ ತರುವಾಯ ಸಾಕ್ಷಾತ್ಕಾರ ಯೋಗಸುಧಾ ಎಂಬುದು ಅವರ ಮಹತ್ವದ ಸ್ವಂತ ರಚನೆ. ಯೋಗತತ್ವ ಹಾಗೂ ಯೋಗಪ್ರಕ್ರಿಯೆ ಇವೆರಡೂ ಈ ಗ್ರಂಥದಲ್ಲಿ ಪೂರ್ಣವಾಗಿ ವಿವರಿಸಲ್ಪಟ್ಟಿವೆ. ೧೦೨೪ ಸುಂದರವಾದ ಸಂಸ್ಕೃತ ಶ್ಲೋಕಗಳಲ್ಲಿ [೩೨ ಪ್ರಕರಣಗಳು] ಯೋಗದ ಅಂಗಾಂಗಗಳೆಲ್ಲ ತಿಳಿಸಲಾಗಿದೆ.

ಶುದ್ಧ ವೈದಿಕ ಪರಂಪರೆ ಆಳವಾದ ಬುದ್ಧಿ, ಸಂಶೋಧಕ ಪ್ರಜ್ಞೆ, ಪ್ರೌಢ ಸಂಸ್ಕೃತ ಶೈಲಿ ಇವುಗಳ ದೃಷ್ಟಿಯಿಂದ ಹಾಗೂ ಯೋಗದ ಅನುಭವ ಜ್ಞಾನದ ದೃಷ್ಟಿಯಿಂದ ಇದು ಅಮೌಲಿಕ ಗ್ರಂಥ ಎಂದು ಹೇಳಬಹುದು.

ಈ ಗ್ರಂಥದ ಮುಖ್ಯ ಲಕ್ಷಣವೇನೆಂದರೆ ಇದು ಶುದ್ಧ ಮತ್ತು ಕೇವಲ ಶ್ರೌತಪ್ರಮಾಣದ ಆಧಾರದ ಮೇಲೆ ಹಾಗೂ ಸ್ವಾನುಭವದ ಆಧಾರದ ಮೇಲೆ ರಚಿತವಾದ ಗ್ರಂಥ. ಪಾತಂಜಲ ಯೋಗಶಾಸ್ತ್ರ, ಗೀತೆ, ಯೋಗವಾಸಿಷ್ಠ ಇತ್ಯಾದಿ ಗ್ರಂಥಗಳಾಚೆಗಿನ ಕೇವಲ ವೇದ, ಬ್ರಾಹ್ಮಣ, ಅರಣ್ಯಕ ಇವುಗಳ ಆಧಾರದಿಂದ ರಚಿತವಾದ ಮೌಲಿಕ ಗ್ರಂಥವಿದು.

ಈ ಗ್ರಂಥದ ಇಂಗ್ಲೀಷ್ ಅನುವಾದವು ಕೂಡ ಮಾಡಲಾಗಿದೆ. ಆದರೆ ದ್ರವ್ಯಾಭಾವದಿಂದ ಅದು ಅಚ್ಚಾಗದೆ ಉಳಿದಿದೆ. ಅದರ ಪ್ರಕಟನೆಯ ಕಾಲದ ಹಾದೀ ಕಾಯಬೇಕಾಗಿದೆ.

ವೇದವೇ ಯೋಗಶಾಸ್ತ್ರಕ್ಕೆ ಮೂಲ ಎಂಬ ಮಾತಿಗೆ ಈ ಗ್ರಂಥ ಪ್ರಮಾಣರೂಪವಿರುವದು.

ಕೇರಳಕ್ಕೆ ಖೋತಾ ಬಜೆಟ್

ತಿರುವನಂತಪುರಂ, ಮಾ. ೧೬– ೧೯೭೩–೭೪ ನೇ ಸಾಲಿಗೆ ೩೪.೫೦ ಕೋಟಿ ರೂ.

ಬ್ರಹ್ಮರ್ಷಿ ದೈವರಾತರಿಗೆ ನಮನ

ಶಾಂತಾ ದಿವಾಕರ

'ಛಂದೋದರ್ಶನ'ದ ಮಂತ್ರದರ್ಶನ ಪಡೆದ ಬ್ರಹ್ಮರ್ಷಿ ದೈವರಾತರು ಹುಟ್ಟಿದ ಊರು ಗೋಕರ್ಣ. ಪೌಷ್ಯ ಶುಕ್ಲ ಪಂಚಮಿ ಸೋಮವಾರ ೧೮೧೩ ಶಕ ಅಥವಾ ಕ್ರಿ. ಶ. ೧೮೯೧ ಗೋಕರ್ಣ ಉತ್ತರ ಕರ್ನಾಟಕದ ಪ್ರಸಿದ್ಧ ಯಾತ್ರಾಸ್ಥಳ.

ತಂದೆಯ ಹೆಸರು ಶ್ರೀ ವಿಘ್ನೇಶ್ವರ ಭಟ್ಟ. ನಿಸ್ಸೀಮ ವೇದ ವಿದ್ಯಾಪಾರಂಗತರು ಅಲ್ಲದೆ ಕೃಷಿ ಜೀವನವನ್ನು ನಡೆಸಿ ಸಂಸಾರ ನಿರ್ವಹಣೆ ಮಾಡಿದಂಥವರು.

ದೈವರಾತರ ತಾಯಿಯ ಹೆಸರು ಶ್ರೀಮತಿ ನಾಗವೇಣಿ. ಆಕೆ ಪಂಡಿತ ಶ್ರೀ ಗಣೇಶಶಾಸ್ತ್ರಿ ಎಂಬುವರ ಮಗಳು. ಶ್ರೀ ವಿಘ್ನೇಶ್ವರಭಟ್ಟ ಮತ್ತು ಶ್ರೀ ಗಣೇಶ ಶಾಸ್ತ್ರಿಗಳು ಒಟ್ಟಿಗೆ ವಾರಣಾಸಿಗೆ ಹೋಗಿ ವೇದಶಾಸ್ತ್ರಗಳನ್ನು ಅಧ್ಯಯನ ಮಾಡಿದವರು.

ವೇದಗಳ ಜ್ಞಾನ ಶ್ರೀ ದೈವರಾತರ ನರ ನರಗಳಲ್ಲಿ ಹರಿಯುತ್ತಿದೆಯೆಂದರೆ ಉತ್ಪ್ರೇಕ್ಷೆಯ ಮಾತೇನಲ್ಲ.

ಜ್ಞಾನಕೃಪೆ

ದೈವರಾತರು ಬಾಲ್ಯದಲ್ಲಿಯೇ ತಂದೆಯ ಸಮ್ಮುಖದಲ್ಲಿ ಋಗ್ವೇದ ಮತ್ತು ತೈತ್ತಿರೀಯ ಯಜುರ್ವೇದ

ಗಿದ್ದ ದೈವರಾತರು ಗುರು ಮತ್ತು ಗುರುಪತ್ನಿಗೆ ಆದರ್ಶಶಿ ಸೇವೆ ಮಾಡಿದರು. ಅವರ ನಿಷ್ಠೆ ವಾಸಿಷ್ಠರನ್ನು ಬೆರಗುಗೊಳಿಸುತ್ತಿತ್ತು.

"ನಾಯನಾ" ಎಂದು ಕರೆದ ಕೂಡಲೇ ಎಲ್ಲಿದ್ದರೆ ಅಲ್ಲಿಂದ, ಕೈಯಲ್ಲಿದ್ದ ಕೆಲಸವನ್ನು ಬಿಟ್ಟು ಓಡಿಬಂದು ಕೈಕಟ್ಟಿ ನಿಲ್ಲುತ್ತಿದ್ದ ದೈವರಾತರು ವಾಸಿಷ್ಠರಿಗೆ ಪ್ರೇಮದ ಮಗನೇ ಆದರು. ಇತರ ಶಿಷ್ಯರೊಡನೆ ಕುಳಿತು ಅಭ್ಯಾಸ ಮಾಡದಿದ್ದರೂ ವಾಸಿಷ್ಠರ ಜ್ಞಾನ ಸಂಪತ್ತನ್ನು ಪಡೆಯದೆ ಇರಲಿಲ್ಲ. ಉಪನಿಷತ್ತುಗಳ ರಹಸ್ಯ, ಮುಖ್ಯ ಪ್ರಾಣೋಪಾಸನೆ ಮತ್ತು ವೈಷ್ಣವವಿದ್ಯೆ ಇತ್ಯಾದಿಗಳನ್ನು ವಾಸಿಷ್ಠರಲ್ಲಿ ಅಭ್ಯಾಸ ಮಾಡಿದ ದೈವರಾತರದು ಪಾಕ ಕಲೆ, ರಂಗೋಲಿ, ತೋಟಗಾರಿಕೆಗಳಲ್ಲಿ ಗುರು ಹಾಗೂ ಗುರುಪತ್ನಿಯಿಂದ ಅತೀವ ಮೆಚ್ಚುಗೆ ಗಳಿಸಿದ ಭಾಗ್ಯ.

ಹಠಯೋಗ

ದೈವರಾತರಿಗೆ ಬರೀ ಪುಸ್ತಕ ಜ್ಞಾನದಿಂದ ಮಸ್ತಕವನ್ನು ತುಂಬಿಸಿಕೊಳ್ಳುವ ಇಚ್ಛೆ ಮೊದಲಿನಿಂದಲೂ ಇರಲಿಲ್ಲ, ತಪಸ್ಸಿನ ಮೂಲಕವೇ ಜ್ಞಾನಾರ್ಜನೆ


ಪದವೇಟು ಗ್ರಾಮದಿಂದ ಹಿಂದಿರುಗಿದ ಶ್ರೀ ದೈವರಾತರು ಇಪ್ಪತ್ತೈದು ವರ್ಷದ ಯುವಕ. ಒಂಭತ್ತು ವರ್ಷದ ಶ್ರದ್ಧಾದೇವಿಯನ್ನು ವಿವಾಹವಾದರು. ಗೃಹಸ್ಥಾಶ್ರಮ ಸ್ವೀಕರಿಸಿ ಗೋಕರ್ಣ



ನಲವತ್ತನಾಲ್ಕು ವರ್ಷಗಳ ಹಿಂದೆ ನಿರಶನ ವ್ರತ– ವಿಭವ ಸಂವ

ಅವರಿಂದ ನಾನು ಕಲಿತದ್ದು ಅನೇಕ ವಿಷಯಗಳು. "ವಾಣಿ" ಯ ಮಹತ್ವವನ್ನು ಗುತಿಸಲು ಸಾಧ್ಯವಾದದ್ದು ಶ್ರೀ ದೈವರಾತರಿಂದಲೇ, ಪ್ರತಿಯೊಂದು 'ಪದ'ದ ಅಂತರಾರ್ಥವನ್ನು ಅರಿಯಬೇಕೆಂಬ ದಾಹ ಮೂಡಿದ್ದು ಶ್ರೀ ದೈವರಾತರು 'ವಾಕ್' ಮೇಲಿನ ಅಚಲ ಶ್ರದ್ಧೆಯನ್ನು ಆಗಾಗ್ಗೆ ಹೇಳುತ್ತಾ ಬಂದಿದ್ದರಿಂದಲೇ ಆಯುರ್ವೇದದ ಬಗ್ಗೆ ನಂಬಿಕೆ ವಿಶ್ವಾಸಗಳು ಮೂಡಿದ್ದು ಶ್ರೀ ದೈವರಾತರ ಅನೇಕ ಪ್ರಯೋಗಗಳನ್ನು ಕಂಡಿದ್ದರಿಂದಲೇ.

ಪ್ರತಿಯೊಂದು ಉಪನಿಷತ್ತು, ವೇದ ಮಂತ್ರಗಳಿಗೂ ಆದಿಭೌತಿಕ, ಆದಿದೈವಿಕ ಆಧ್ಯಾತ್ಮಿಕ ಅರ್ಥಗಳು ಇವೆಯೆಂಬ ಜ್ಞಾನ ಪಡೆದದ್ದೂ ಶ್ರೀ ದೈವರಾತರಿಂದಲೇ ಭಜನೆಯ ಮಹತ್ವವನ್ನು ಒತ್ತಿ ಹೇಳುವ ಶ್ರೀ ದೈವರಾತರು,



ಲೇಖನದಲ್ಲಿ ನಿರತರಾದ ಶ್ರೀ ದೈವರಾತರು–ಅವರ ೯ ಪುಸ್ತಕಗಳು ಇನ್ನೂ ಪ್ರಕಟವಾಗಬೇಕಿದೆ.

ಗಿಸಿದರು. ಶ್ರೀ ರಮಣ ಮಹರ್ಷಿಗಳೊಡನೆ ಸಂಭಾಷಣೆ ಮಾಡಿ ತಮ್ಮ ಅನೇಕ ಸಮಸ್ಯೆಗಳನ್ನು ಬಗೆಹರಿಸಿಕೊಂಡ ದೈವರಾತರು ಕಾಲಿಗೆ ಗೆಜ್ಜೆ ಕಟ್ಟಿ ಕುಣಿದು ಭಜನೆಮಾಡಿ ಮಹರ್ಷಿಗಳ ಕೃಪೆಗೆ ಪಾತ್ರರಾದರು.

ಮಂತ್ರದರ್ಶನ

ಶ್ರೀ ದೈವರಾತರಿಗೆ ಮಂತ್ರದರ್ಶನವಾದದ್ದು ಆಂಧ್ರಪ್ರದೇಶದ ಪದವೇಟು ಎಂಬ ಗ್ರಾಮದಲ್ಲಿ ರೇಣುಕಾಂಬ ದೇವಾಲಯವಿರುವ ಕ್ಷೇತ್ರ. ಗುರು ಗುರುಪತ್ನಿ ಮತ್ತು ದೈವರಾತರು. ಮೂವರೂ ಒಟ್ಟಿಗೆ ತಪಸ್ಸುಮಾಡುವ ಸಂಕಲ್ಪದಿಂದ ಆರಂಭಿಸಿದರು. ಒಂದು ತಿಂಗಳಾದಮೇಲೂ ಶ್ರೀ ದೈವರಾತರು ತಪಸ್ಸನ್ನು ಬಿಡದೆ ಮುಂದುವರೆಸಿದರು. ದೇಹಭ್ರಾಂತಿಯನ್ನು ಬಿಟ್ಟಿದ್ದ ಶ್ರೀ ದೈವರಾತರು ತಪಸ್ಸಿನಲ್ಲಿ ಮಗ್ನರಾಗಿದ್ದ ಸಮಯದಲ್ಲಿ, ಅವರ ಬಾಯಿಂದ ಕೇಳಿಬಂದ ಮಂತ್ರಗಳು 'ಛಂದೋದರ್ಶನ'ದ ಮಂತ್ರಗಳು. ಶಿಷ್ಯನ ಬಾಯಿಂದ ಬಂದ ಮಂತ್ರಗಳು ತಕ್ಷಣ ಗುರುಗಳು ತಾವೇ ಸ್ವತಃ ಬರೆದುಕೊಂಡು, ಅದಕ್ಕೆ ಭಾಷ್ಯವನ್ನು ರಚಿಸಿದರು.

ನೀಡುವುದು ಶ್ರೀ ದೈವರಾತರ ಗುರಿಯಾಗಿತ್ತು.

ಶ್ರೀ ದೈವರಾತರು ವೇದಸಂಸ್ಕೃತಿಯಲ್ಲಿ ನಂಬಿಕೆಯುಳ್ಳವರು. ಆಧ್ಯಾತ್ಮಿಕ ರಂಗದಲ್ಲಿ ಸ್ತ್ರೀಯರ ಸಮಾನ ಹಕ್ಕಿಗಾಗಿ ಹೋರಾಡಿದವರು. ತಮ್ಮ ಹೆಣ್ಣುಮಕ್ಕಳಿಗೆ ಗಾಯತ್ರಿ ಉಪದೇಶ ನೀಡಿ ವೇದಗಳ ಕಾಲದ ಹೆಣ್ಣುಮಕ್ಕಳ ಸ್ಥಾನಮಾನವನ್ನು ಜ್ಞಾಪಿಸಿದವರು. ಮನೆಯಲ್ಲಿ ಅಗ್ನಿಯನ್ನು ಇಟ್ಟು ಅದಕ್ಕೆ ದಿನವೂ ಹೋಮ ಹವನಗಳನ್ನು ಮಾಡುವುದರಲ್ಲಿ ಪತ್ನಿ ಶ್ರೀಮತಿ ಶ್ರದ್ಧಾದೇವಿಗೆ ಪೂರ್ಣ ಅಧಿಕಾರ ಕೊಟ್ಟವರು. ಹೆಣ್ಣುಮಕ್ಕಳು ವೇದ ಮಂತ್ರಗಳನ್ನು ಕಂಠಪಾಠಮಾಡಿ ಅದರ ಅರ್ಥಸಹಿತವಾಗಿ ಉಪನ್ಯಾಸಗಳನ್ನು ಮಾಡಲು ತರಬೇತಿ ನೀಡಿದವರು.

ವೈದಿಕರು ಎಂದ ಕೂಡಲೇ ನಮ್ಮ ಕಣ್ಮುಂದೆ, ಸಂಕುಚಿತ ಮನೋಭಾವದ ವ್ಯಕ್ತಿಯ ಚಿತ್ರ ಬರುವುದು ಸಹಜ.

ಶ್ರೀ ದೈವರಾತರು ಅದಕ್ಕೆ ಹೊರತಾದವರು. ಪರಮಾತ್ಮನು ಸರ್ವಾಂತರ್ಯಾಮಿಯೆಂದು ಅರ್ಥಮಾಡಿಕೊಂಡ ದೈವರಾತರು ಮನಸ್ಸೂ "ವಿಷ್ಣು"ವಿನಂತೇ ವ್ಯಾಪ್ತಿಯುಳ್ಳದ್ದು.

ದೈವರಾತರು ಬಾಲ್ಯದಲ್ಲಿಯೇ ತಂದೆಯ ಸಮ್ಮುಖದಲ್ಲಿ ಋಗ್ವೇದ ಮತ್ತು ತೈತ್ತಿರೀಯ ಯಜುರ್ವೇದಗಳನ್ನು ಅಭ್ಯಾಸ ಮಾಡಿದರು. ಗೋಕರ್ಣದಲ್ಲಿದ್ದ ಇತರ ಅಧ್ಯಾಪಕರ ಬಳಿಯಲ್ಲಿ ವೇದಾಭ್ಯಾಸ ನಡೆಸಿದರು. ದೈವರಾತರಿಗೆ ಪರಂಪರಾನುಗತವಾಗಿ ಬಂದಿದ್ದ ಪೌರೋಹಿತ್ಯ ವೈದಿಕ ಜೀವನ ನಡೆಸಲು ಇಚ್ಛೆಯಿಲ್ಲದ ವೈದಿಕ ವಾಙ್ಮಯದಲ್ಲಿ ವೈಜ್ಞಾನಿಕ ಸಂಶೋಧನೆಯನ್ನು ನಡೆಸಲು ನಿಶ್ಚಯಿಸಿದರು.

ಶ್ರೀ ದೈವರಾತರಿಗೆ ಚಿಕ್ಕಂದಿನಲ್ಲಿ ಅನೇಕ ಮಹಾತ್ಮರ ಸಂದರ್ಶನ ಸಾಧ್ಯವಾಯಿತು.

ಶ್ರೀ ದೈವರಾತರಿಗೆ ಪ್ರವಾಸದಲ್ಲಿ ಮತ್ತು ಮಹಾತ್ಮರನ್ನು ಸಂದರ್ಶಿಸಿ ಆಧ್ಯಾತ್ಮಿಕ ಜ್ಞಾನಸಂಪತ್ತನ್ನು ಹೆಚ್ಚಿಸಿಕೊಳ್ಳಲು ತೀವ್ರ ಅಭಿಲಾಷೆ. ಅದರಿಂದಾಗಿ ಭಾರತದ ಅನೇಕ ಋಷಿಮುನಿಗಳನ್ನು ಎಷ್ಟೇ ದೂರವಿದ್ದರೂ ಪ್ರವಾಸ ಮಾಡಿ, ಸಂದರ್ಶನ ಪಡೆದು ಅಭಿವಂದನೆಗಳನ್ನು ಸಲ್ಲಿಸಿದ ಭಾಗ್ಯ ಪಡೆದರು.

ಗೋಕರ್ಣಕ್ಕೆ ಬಂದ ಉಜ್ಜೈಯಿನಿಯ ಸಂತ ರಾಮದಾಸರ ದರ್ಶನ ಭಾಗ್ಯಪಡೆದ ಶ್ರೀ ದೈವರಾತರು ಅವರ ಶಿಷ್ಯಮಂಡಲಿ ಸೇರಿ ಇಡೀ ಭಾರತವನ್ನು ಸುತ್ತಿದರು. ಭಕ್ತಿಯೋಗದ ಮಾರ್ಗವನ್ನು ಕಲಿತು ಭಜನೆಗಳನ್ನು ಮೈಮರೆತು ಹಾಡುವುದನ್ನು ಕಲಿತರು. ಸತ್ಸಂಗದೊಡನೆ ನೇಪಾಲ್‌ವರೆಗೂ ಪ್ರಯಾಣ ಮಾಡಿ ರಾಮದಾಸರ ಅಂತ್ಯದವರೆಗೂ ಅವರ ಸಂಗಡಿಗರಾಗಿ ಸೇವೆ ಸಲ್ಲಿಸಿದರು.

ನಿಷ್ಠೆ

ಗೋಕರ್ಣಕ್ಕೆ ಹಿಂದಿರುಗಿದ ಸುಮಾರು ಹದಿನೈದು ವರ್ಷದ ದೈವರಾತರಿಗೆ ಮತ್ತೊಬ್ಬ ಮಹಾಪುರುಷರ ಸಂದರ್ಶನವಾಯಿತು. ಅವರ ಹೆಸರು ಶ್ರೀ ಟೇಂಬೇ ಮಹಾರಾಜ್ (ಶ್ರೀ ವಾಸುದೇವಾನಂದ ಸರಸ್ವತಿ) ಅವರ ಬಳಿ ಹಠಯೋಗದ ಆಸನ, ಪ್ರಾಣಾಯಾಮ ಮತ್ತು ಸತ್ಕ್ರಿಯೆ ಇವುಗಳನ್ನು ಚೆನ್ನಾಗಿ ಕಲಿತರು. ಗೋಕರ್ಣಕ್ಕೆ ಬಂದ ವಾಸಿಷ್ಠ ಗಣಪತಿಮುನಿಯೆಂಬ ಜ್ಞಾನಶ್ರೇಷ್ಠರು ಶ್ರೀ ದೈವರಾತರಿಗೆ ಗುರುಗಳಾಗಿ ಲಭಿಸಿದರು. ಮನೆಯಲ್ಲಿ ಅಡಿಗೆ ಕೆಲಸಕ್ಕಾಗಿ ಒಬ್ಬ ಹುಡುಗ ಬೇಕಾಗಿತ್ತು. ದೈವರಾತರು ಸೇವೆಯೇ ದೊಡ್ಡ ಸಾಧನವೆಂದು ನಂಬಿದ್ದವರು ಅಡಿಗೆ ಕೆಲಸದಲ್ಲಿ ನಿಪುಣರಾ

... ಇಚ್ಛೆ ಮೊದಲಿನಿಂದಲೂ ಇರಲಿಲ್ಲ, ತಪಸ್ಸಿನ ಮೂಲಕವೇ ಜ್ಞಾನಾರ್ಜನೆಗಳಿಸಿ ಆಧ್ಯಾತ್ಮಿಕವಾಗಿ ಸಾಧನೆ ಮಾಡಬೇಕೆಂಬ ನಿಶ್ಚಯ ಮಾಡಿದರು.

ತಮ್ಮ ದೇಹದ ಮೇಲೆ ಅನೇಕ ಹಠಯೋಗ ಕ್ರಿಯೆಗಳನ್ನು ನಡೆಸಿ ಯಶಸ್ವಿಯಾಗಿರುವ ಕೀರ್ತಿ ಶ್ರೀ ದೈವರಾತರದು.

ಗುರುಗಳಾದ ವಾಸಿಷ್ಠ ಮುನಿಗಳೊಡನೆ ತಿರುವಣ್ಣಾಮಲೈನ ಅರುಣಾಚಲದಲ್ಲಿ ರಮಣ ಮಹರ್ಷಿಗಳನ್ನು ಭೇಟಿಮಾಡಿ, ಅವರ ದರ್ಶನದಿಂದ ಪುಲಕಿತರಾಗಿ "ರಮಣ ವಿಭಕ್ತ್ಯಷ್ಟಕ" ಎಂಬ ಮಂತ್ರಗಳನ್ನು ರಚಿಸಿ, ಪಠಿಸಿ ಭಕ್ತರನ್ನು ಆನಂದಸಾಗರದಲ್ಲಿ ಮುಳು

ನಲವತ್ತನಾಲ್ಕು ವರ್ಷಗಳ ಹಿಂದೆ ನಿರಶನ ವ್ರತ– ವಿಭವ ಸಂವತ್ಸರದ ಫಾಲ್ಗುಣ ಕೃಷ್ಣ ಅಷ್ಟಮಿಯಿಂದ (೧೮–೩–೧೯೨೯) ಶ್ರೀ ದೈವರಾತರು ಕೇವಲ ತೀರ್ಥಪ್ರಾಶನದಿಂದ ಒಂದು ತಿಂಗಳು ನಿರಶನ ವ್ರತ ಕೈಗೊಂಡಿದ್ದರು.

ದಲ್ಲಿ 'ಗೋರಕ್ಷ ಬ್ರಹ್ಮಚರ್ಯಾಶ್ರಮ' ಎಂಬ ಗುರುಕುಲವನ್ನು ಸ್ಥಾಪಿಸಿದರು. (೧೯೧೯)

ಗುರಿ

ವೇದಾಧ್ಯಯನ, ಶಾಸ್ತ್ರ, ಕೃಷಿ ವಿಜ್ಞಾನ ಮತ್ತು ಗೋ ಸಂರಕ್ಷಣ ಈ ವಿಷಯಗಳಲ್ಲಿ ತೀವ್ರ ಶಿಕ್ಷಣವನು

ಯೆಂಬ ಜ್ಞಾನ ಪಡೆದರೂ, ಶ್ರೀ ದೈವರಾತರಿಂದಲೇ ಭಜನೆಯ ಮಹತ್ವವನ್ನು ಒತ್ತಿ ಹೇಳುವ ಶ್ರೀ ದೈವರಾತರು, ಗೋಕರ್ಣದಲ್ಲಿ ಅನೇಕ ಶಿವರಾತ್ರಿಗಳನ್ನು ಸಮುದ್ರದಂಡೆಯಮೇಲೆ ಕಾಲಿಗೆ ಗೆಜ್ಜೆ ಕಟ್ಟಿ ಮೈಮರೆತು ತಾವೇ ರಚಿಸಿದ ಭಜನೆಗಳನ್ನು ಹಾಡುತ್ತ ಕಳೆದರು. ವೈದಿಕ ಜ್ಞಾನ ಸಂಪತ್ತು ಇದ್ದವರು 'ಭಜನೆ'ಯನ್ನು ಅಲ್ಲಗಳೆಯುವವರು ಅನೇಕರು. ಆದರೆ 'ನಾನು'ದ ಮಹತ್ವವನ್ನು ಅರಿಯಲು ಶ್ರೀ ದೈವರಾತರು ತುಂಬಾ ಸಹಾಯಕರಾದರು. "ನಾನು" ಹೋದರೂ "ನಾವು"ವು ಶಾಶ್ವತ ಎಂದು ಮನವರಿಕೆಮಾಡಿಕೊಟ್ಟಿರುವ ಬ್ರಹ್ಮರ್ಷಿ ದೈವರಾತರಿಗೆ ಗೌರವಾದರಪೂರ್ವಕ ನಮನಗಳು.

★ ★ ★ ★ ★ ★ ★ ★ ★ ★ ★ ★ ★ ★ ★ ★ ★


ಅಗಾಧ ಪಾಂಡಿತ್ಯ; ಜ

ನಾನೊಬ್ಬ ಮನೋರೋಗದ ವೈದ್ಯ. ನಾನು ಬ್ರಹ್ಮರ್ಷಿ ದೈವರಾತರನ್ನು ಮೊದಲು ಭೇಟಿಮಾಡಿದುದು ನನ್ನ ವೃತ್ತಿಯ ಸಂಬಂಧದಲ್ಲಿ.

ನಾನು ಮನೋರೋಗ ಚಿಕಿತ್ಸೆಯಲ್ಲಿ ಬೋಧೆ ಮತ್ತು ತರಬೇತಿ ಪಡೆದುದು ಪಾಶ್ಚಾತ್ಯ ದೇಶಗಳಲ್ಲಿ. ಪಾಶ್ಚಾತ್ಯ ಸಂಸ್ಕೃತಿಯಿಂದ ಪಡೆದ ಭಾವನೆಗಳು ಮತ್ತು ತರಬೇತಿ ಭಾರತಕ್ಕೆ ಸರಿಹೊಂದುವುದಿಲ್ಲ. ನಮ್ಮ ಭಾಷೆಯ ಮತ್ತು ಜೀವನ ವಿಧಾನಗಳ ಉತ್ತಮ ಅಂಶಗಳನ್ನು ಕಲಿಯುವುದು ಅಗತ್ಯ ಎಂದು ನನಗೆ ಅನ್ನಿಸಿತು. ಇಂದು ನಮ್ಮ ಮಧ್ಯೆ ಇರುವ ಅನೇಕ ಮಾನವೀಯ ಸಮಸ್ಯೆಗಳು ಅನಾದಿ ಕಾಲದಿಂದಲೂ ಇರುವುವು. ಅವುಗಳನ್ನು ನಮ್ಮ ಹಿರಿಯರು ವಾಸ್ತವಿಕ ಅನುಭವಗಳ ಆಧಾರದ ಮೇಲೆ ಬಗೆಹರಿಸುತ್ತಿದ್ದರು. ಪ್ರಾಚೀನ ಕಾಲದಲ್ಲಿ ಮನುಷ್ಯರ ವಿಚಾರ ರೀತಿ, ಅನುಭವಗಳು ಮತ್ತು ವರ್ತನೆಗಳನ್ನು ಅರ್ಥಮಾಡಿಕೊಳ್ಳಲು ಭಾರತೀಯರು ಅನುಸರಿಸುತ್ತಿದ್ದ ವಿಧಾನಗಳನ್ನು ತಿಳಿಯಲು ನಾನು ಪ್ರಯತ್ನಿಸುತ್ತಿದ್ದೆ. ಅವುಗಳನ್ನು ತಿಳಿಸುವ ಮೂಲಗಳಿಗಾಗಿ ಹುಡುಕಾಡುತ್ತಿದ್ದೆ. ಈ ಮೂಲಗಳು ವೇದಗಳು, ಉಪನಿಷತ್ತುಗಳು ಗೀತೆ ಮತ್ತು ಇತರ ಭಾರತೀಯ ಶಾಸ್ತ್ರಗಳು ಎಂಬುದು ನನಗೆ ತಿಳಿಯಿತು. ನನ್ನ ಸನ್ಮಿತ್ರರಾದ ಶ್ರೀ ಆರ್. ಆರ್. ದಿವಾಕರರು ಬ್ರಹ್ಮರ್ಷಿ ದೈವರಾತರಿಗೆ ನನ್ನನ್ನು ಪರಿಚಯ ಮಾಡಿಸಿಕೊಟ್ಟರು. ಬ್ರಹ್ಮರ್ಷಿ ದೈವರಾತರು ವೇದ, ಉಪನಿಷತ್ತು, ಶಾಸ್ತ್ರಗಳ ಬಗ್ಗೆ ತಿಳಿಸಬಲ್ಲ ಜ್ಞಾನದ ಚಿಲುಮೆಯಾಗಿರುವರು.

ಇದಾದನಂತರ ಬ್ರಹ್ಮರ್ಷಿ ದೈವರಾತರನ್ನು ನಾನು ಹಲವಾರು ಸಲ ಭೇಟಿ ಮಾಡಿದೆ. ಬ್ರಹ್ಮರ್ಷಿಗಳು ಅವರಿಗಾಗಿರುವ ವಯಸ್ಸಿಗಿಂತಲೂ ಚಿಕ್ಕವರಾಗಿ ಕಾಣುವರು, ಅವರು ಪದ್ಮಾಸನದಲ್ಲಿ ಕೂಡುವರು ಮತ್ತು ಅವರ ನಡಿಗೆಯಲ್ಲಿ ಚುರುಕು ಕಾಣಬಹುದು. ಅವರ ಧ್ವನಿ ಮತ್ತು ಕಂಠ ಸ್ಪಷ್ಟ ಮತ್ತು ಕಂಚಿನಂತಿದೆ. ಅವರ ಸ್ವರ, ರಾಗಗಳು ಛಂದೋಬದ್ಧವಾಗಿವೆ.

ಮನೋವಿಜ್ಞಾನದ ಬಗ್ಗೆ ಮತ್ತು ನಮ್ಮ ಶಾಸ್ತ್ರಗಳಲ್ಲಿ ವಿವರಿಸಿರುವ ಮನುಷ್ಯರ ವರ್ತನೆಯ ಬಗ್ಗೆ ವಿವರಿಸುವಂತೆ ಬ್ರಹ್ಮರ್ಷಿಗಳನ್ನು ನಾನು ಕೇಳಿ



ಶ್ರೀ ದೈವರಾತರ ಬರಹವು ತುಂಬಾ ಚೊಕ್ಕ ಹಾಗೂ ಅಚ್ಚುಕಟ್ಟಾದುದು. ಸಂಸ್ಕೃತ ಭಾಷೆ, ಆ ಭಾಷೆಯಲ್ಲಿ ಗದ್ಯ ಪದ್ಯ ರಚನೆ ಹಾಗೂ ಭಾಷಣ ಅವರಿಗೆ ಕರತಲಾಮಲಕ.

ಬ್ರಹ್ಮರ್ಷಿ ದೈವರಾತರು-ಮಹರ್ಷಿ ಮಹೇಶಯೋಗಿಗಳು

ವಿಲಕ್ಷಣ ಯೋಗಾಯೋಗ

ನನ್ನ ಜೀವನದಲ್ಲಿ ಹಲವೊಂದು ಇಷ್ಟವಾದ ಯೋಗಾಯೋಗಗಳನ್ನು ನಾನು ಕಂಡಿದ್ದೇನೆ. ಅವುಗಳಲ್ಲಿ ಗೋಕರ್ಣದ ಬ್ರಹ್ಮರ್ಷಿ ಹಾಗೂ ಋಷಿಕೇಶದ ಮಹರ್ಷಿ ಇವರ ಪರಸ್ಪರ ಭೆಟ್ಟಿ ; ಆ ಭೆಟ್ಟಿಯ ಫಲವಾಗಿ ಮುಂದೆ ಸಂಭವಿಸಿದ ಸಾಂಸ್ಕೃತಿಕ ಸತ್ ಪ್ರಚಾರ.

ನನಗೆ ಮಹರ್ಷಿಗಳ ಪರಿಚಯ ಮೊದಲಿನಿಂದ ಸ್ವಲ್ಪ ಮಟ್ಟಿಗೆ ಇತ್ತು. ಬೆಂಗಳೂರು ರಾಷ್ಟ್ರೀಯ ಶಾಲೆಯಲ್ಲಿ ಅವರು ಮಾಡಿದ ಭಾಷಣದ ಕಾಲಕ್ಕೆ ನಾನು ಅಧ್ಯಕ್ಷನಾಗಿದ್ದೆ.

ಮಹರ್ಷಿ ಮಹೇಶಯೋಗಿಗಳು ಅತೀಮಾನಸ ಯೋಗದ ಪುರಸ್ಕರ್ತರು ಎಂಬುದು ಜನಜನಿತವಾಗಿತ್ತು. ಅವರು ಗೀತೆಯ ಆರು ಅಧ್ಯಾಯಗಳ ಮೇಲೆ ಬರೆದ ಟೀಕೆ,ಸತ್ [ಬೀಯಿಂಗ್] ವಿಷಯದ ಬಗ್ಗೆ ಬರೆದ ಗ್ರಂಥ ಪ್ರಕಟವಾಗಿ ಲೋಕಪ್ರಿಯವಾಗಿದ್ದವು. ಆಧ್ಯಾತ್ಮಿಕ ಪುನರುಜ್ಜೀವನ ಆಂದೋಲನವನ್ನು ಪ್ರಾರಂಭಿಸಿ ಹಲವಾರು ವರುಷಗಳಾಗಿದ್ದವು.

ಮಹರ್ಷಿಗಳು ಇನ್ನು ವೇದ ಭಾಷ್ಯವನ್ನು ಬರೆಯತಕ್ಕವರಿದ್ದಾರೆಂದು ನನಗೆ ಅವರ ಶಿಷ್ಯರಲ್ಲಿ ಒಬ್ಬರು ಹೇಳಿದರು. ಕೂಡಲೇ ನನಗೆ ನಿಕಟ ಪರಿಚಿತರೂ ಮಂತ್ರದ್ರಷ್ಟಾರರೂ ವೇದಮಂತ್ರಗಳ ಗೂಡಾರ್ಥ ತಿಳಿದವರೂ ಆದ ಬ್ರಹ್ಮರ್ಷಿ ದೈವರಾತರ ಹಾಗೂ ಮಹರ್ಷಿಗಳ ಸಂಯೋಗವಾದರೆ ಒಂದು ಹೊಸ. ಯುಗವೇ ಪ್ರಾರಂಭವಾಗಬಹುದು ಎಂದು ಎನಿಸಿತು.

ಮಹರ್ಷಿಗಳು ಬೆಂಗಳೂರಲ್ಲಿ ಆ ದಿನ ಒಂದೇ ಒಪ್ಪತ್ತು ಇರತಕ್ಕವರಿದ್ದರು. ಆ ಮೊದಲು ಹದಿನೈದು ದಿನ ಇದ್ದು ಅನೇಕರಿಗೆ ಅತಿಮಾನಸ ಧ್ಯಾನದ ದೀಕ್ಷೆ ಕೊಟ್ಟು ಹೋಗಿದರು. ನಾನು ಅವರಿಗೆ ಭೆಟ್ಟಿಯಾದೆ. ತಾವು ವೇದ ಭಾಷ್ಯವನ್ನು ಬರೆಯಲು ಉಜ್ಜುಗಿಸಿದ್ದರೆ ಬ್ರಹ್ಮರ್ಷಿ ದೈವರಾತರು ತಮಗೆ ಮಹತ್ವದ ಸಹಾಯವನ್ನು ಮಾಡಬಲ್ಲರೆಂದು ಅರಿಕೆ ಮಾಡಿಕೊಂಡೆ. ಛಂದೋದರ್ಶನದ ಆಚ್ಚಾದ ಒಂದು ಪ್ರತಿಯನ್ನು ಅವರ ಕೈಯಲ್ಲಿರಿಸಿದೆ.

ಅವರೆಲ್ಲಿ ಎಂದು ಮಹರ್ಷಿಗಳು. ಗೋಕರ್ಣದಲ್ಲಿ ಎಂದೆ ನಾನು.

ಕೂಡಲೆ ಅವರನ್ನು ಇವರ ಜೊತೆ ಋಷಿಕೇಶಕ್ಕೆ ಕಳಿಸಿಕೊಡಿ ಎಂದು ಹೇಳಿ ಒಬ್ಬರಿಗೆ ಆ ಕೆಲಸವನ್ನು ಒಪ್ಪಿಸಿ ಹೊರಟೇ ಹೋದರು ಮಹರ್ಷಿಗಳು.

ಆಯಿತು. ನನ್ನ ಪತ್ರವನ್ನು ಕಂಡು ಮಹರ್ಷಿಗಳ ಆ ಶಿಷ್ಯರು ಗೋಕರ್ಣಕ್ಕೆ ಹೋದರು. ಬ್ರಹ್ಮರ್ಷಿಗಳನ್ನು ಕರೆದುಕೊಂಡು ಋಷಿಕೇಶಕ್ಕೆ ಮುಟ್ಟಿಸಿದರು. ಎಂಟು ಹತ್ತು ದಿನ ಆ ಋಷಿದ್ವಯರ ಪರಸ್ಪರ ಸಂಗೋಷ್ಠಿಗಳು ನಡೆದು ಅವರಿಬ್ಬರಲ್ಲಿ ಒಂದು ಮಹಾಸ್ನೇಹ ಭಾವ ಬೆಳೆದುಬಿಟ್ಟಿತು

ಅದೇ ಮುಂದೆ ಬ್ರಹ್ಮರ್ಷಿ ದೈವರಾತರನ್ನು ಎರಡು ಸಲ ಏಳೇಳು ತಿಂಗಳುಗಳವರೆಗೆ ಪರದೇಶಗಳಿಗೆ ಆಕರ್ಷಿಸಿತು. ಆದರ ವಿವರವನ್ನು ಮುಂದೆ ಕೊಡುವೆ. ಆದರೆ ಈ ವಿಲಕ್ಷಣವಾದ ಯೋಗಾಯೋಗವು, ಸಂಭವಿಸಿದ ಸಂದರ್ಭ ಬಹಳೇ ಚಮತ್ಕಾರಪೂರ್ಣವಾದುದು ಎಂದು ಹೇಳಬಲೆ.

ರಂಗನಾಥ ಶರ್ಮಾ




ಶ್ರೀ ದೈವರಾತರು ಹಾಗೂ ಮಹರ್ಷಿ ಮಹೇಶಯೋಗಿಗಳ ಸಂದರ್ಶನ

ಭಾರತೀಯ ಸಂಸ್ಕೃತಿಯ ಅಭಿಮಾನಿಗಳಿಗೆ ಬಿನ್ನಹ

ಬ್ರಹ್ಮರ್ಷಿ ದೈವರಾತರ. 'ಛಂದೋದರ್ಶನ' 'ವಾಕ್‌ಸುಧಾ' ಹಾಗೂ "ವೇದಾರ್ಥ ಕಲ್ಪಲತಾ" ಎಂಬ ಮೂರು ಪುಸ್ತಕಗಳು ಮಾತ್ರ ಪ್ರಕಟವಾಗಿದ್ದು ಪ್ರಕಟವಾಗಬೇಕಾಗಿರುವ ಅವರ ಕೃತಿಗಳು: ೧) ಮೂಲ ಯಜುರ್ವೇದ ಸಂಹಿತಾ, ೨) ಗಾಯತ್ರಿಸುಧಾ, ೩) ಪುರುಷ ಸೂಕ್ತ ಸುಧಾ, ೪) ವೇದ—ವೇದಿಕಾ, ೫) ಸಾಕ್ಷಾತ್ಕಾರ ಯೋಗಸುಧಾ, ೬) ವೇದ ಹೃದಯಂ ೭) ರಾಮ ರಸಾಯನ ೮) ಅಹಂ ಪ್ರತ್ಯಯ ವಿಮರ್ಶೆ, ಹಾಗೂ ೯) ಸಪ್ತ ಮರ್ಯಾದ ಸದ್ವಿದ್ಯಾ (ಈ ಗ್ರಂಥ ವಿನ್ನೂ ಪೂರ್ತಿಗೊಂಡಿಲ್ಲ.)

ಬ್ರಹ್ಮರ್ಷಿ ದೈವರಾತರ ಭಾರತೀಯ ಸಂಸ್ಕೃತಿಯ ಪ್ರಜ್ಞೆ ಋಗ್ವೇದ ಕಾಲದಿಂದ ಈ ಕ್ಷಣದವರೆಗೆ ತೇಜಸ್ವಿಯಾಗಿ ಬೆಳಗುತಿದೆ. ಅದರ ಆವಿರ್ಭಾವವನ್ನು ನಾವು ಅವರ ಸಂಸ್ಕೃತ ಗ್ರಂಥಗಳಲ್ಲಿ ಕಾಣುತ್ತೇವೆ. ಅವರು ಇನ್ನೂ ಹೊಸ ಗ್ರಂಥಗಳನ್ನು [ವಯಸ್ಸು ೮೨] ಬರೆಯುತ್ತಲೆ ಇದ್ದಾರೆ. ಈಚೆಗೆ ಪಾಶ್ಚಾತ್ಯ ರಾಷ್ಟ್ರಗಳಿಗೆ ಹೋದಾಗ ವೇದ ವಿದ್ಯಾ ಪ್ರಾಣ ಪ್ರತಿಷ್ಠಾ' ಎಂಬ ಚಿಕ್ಕ ವೇದಾಭ್ಯಾಸಕ್ರಮದ ಬಗ್ಗೆ ಪುಸ್ತಕವನ್ನು ಬರೆದು ಮಹೇಶ ಯೋಗಿಗಳಿಗೆ ಕೊಟ್ಟಿದ್ದಾರೆ.

ಶ್ರೀ ದೈವರಾತರು ಕರ್ನಾಟಕಸ್ಥರು, ಕನ್ನಡ ಅವರ ಮಾತೃಭಾಷೆ.



ಅಮೆರಿಕದ ಟೆಲಿವಿಷನ್ ಕಾರ್ಯಕ್ರಮವೊಂದರಲ್ಲಿ ಪಾಲ್ಗೊಂಡ

...ಸ್ತ್ರಿ ಅವರ ವಾಸಸ್ಥಾನ. ಅವರ ಎಲ್ಲ ಪುಸ್ತಕಗಳ ಪ್ರಕಟನೆ ನಮ್ಮೆಲ್ಲರ ಹೊಣೆ.

ಈ ಮಹಾಕಾರ್ಯಕ್ಕೆ ಕೈಬಿಟ್ಟು ಸಹಾಯ ಮಾಡುವವರು ಬೇಕು. ಅಂಥ ಅಭಿಮಾನಿಗಳು, ಉದಾರ ದಾನಿಗಳು ಕರ್ನಾಟಕದಲ್ಲಿ ಇರುವರೆಂಬ ಭರವಸೆ ನನಗಿದೆ.

ಕೂಡಲೇ ಧನಸಹಾಯ ಮಾಡಬೇಕೆಂದು ಬಿನ್ನವಿಸುವೆ.

ರಂಗನಾಥದಿವಾಕರ
ಲೋಕಶಿಕ್ಷಣ ಟ್ರಸ್ಟ್
ಹುಬ್ಬಳ್ಳಿ ಅಥವಾ ಬೆಂಗಳೂರು.

★ ಉ ★ ★ ★ ★ ★ ★ ★ ★ ★

ಜ್ಞಾಪಕ ಶಕ್ತಿ

ಕೊಂಡೆ. ಬ್ರಹ್ಮರ್ಷಿಗಳು ಸ್ವಲ್ಪಹೊತ್ತು ಯೋಚನಾಮಗ್ನರಾಗಿದ್ದರು. ಮನಶಾಸ್ತ್ರವನ್ನು ವಿವರಿಸುವ ಯಾವ ಒಂದು ಗ್ರಂಥ ಅಥವಾ ಒಂದು ಅಧ್ಯಾಯ ಇಲ್ಲ ಎಂದು ಅವರು ನುಡಿದರು. ಮನಶ್ಶಾಸ್ತ್ರದ ಬಗೆಗಿನ ಸ್ತ್ರದ ಬಗೆ ತಿಳಿಸಲು ಋಗ್ವೇದದಿಂದ ಶ್ಲೋಕ ಮತ್ತು ಪದ್ಯಗಳನ್ನು ಹೇಳಲಾರಂಭಿಸಿದರು. "ಒಂದು ನಿಮಿಷ ತಡೆಯಿರಿ" ಎಂದವರೇ ಉಪನಿಷತ್ತುಗಳಿಂದ ಉಲ್ಲೇಖಿಸಲಾರಂಭಿಸಿದರು. ಇತರ ಕೆಲವು ಮೂಲಗಳಿಂದಲೂ ಅವರು ಇವುಗಳಿಗೆ ಸಂಬಂಧಿಸಿದಂತೆ ಉದ್ಧರಿಸಿದರು. ಬ್ರಹ್ಮರ್ಷಿಗಳ ಅಪಾರ ಪಾಂಡಿತ್ಯ ಮತ್ತು ಅಸಾಧಾರಣ ಜ್ಞಾಪಕಶಕ್ತಿಗೆ ಇದಕ್ಕಿಂತಲೂ ಬೇರೆ ಸಾಕ್ಷ್ಯ ಬೇಕಾಗಿಲ್ಲ.

ಒಂದು ವಿಷಯಕ್ಕೆ ಸಂಬಂಧಿಸಿದಂತೆ

ಡಾ|| ಎಸ್. ಎಸ್. ಜಯರಾಂ

ವಿಷಯವು ಹಲವಾರು ಗ್ರಂಥಗಳಲ್ಲಿ ಚದುರಿಹೋಗಿದೆ ಎಂದು ಬ್ರಹ್ಮರ್ಷಿಗಳು ಹೇಳಿದರು. ಮತ್ತು ಮನಶ್ಶಾಸ್ತ್ರವೇ ಪ್ರತ್ಯೇಕವಾಗಿರದೆ ಸಮಗ್ರ ಜೀವನದ ಮಾನವೀಯ, ಮತೀಯ ಮುಂತಾದ ಅಂಶಗಳೊಡನೆ ಹಾಸುಹೊಕ್ಕಾಗಿ ಬೆರೆತಿದೆ ಎಂಬ ಅಂಶವನ್ನೂ ಬ್ರಹ್ಮರ್ಷಿಗಳು ತಿಳಿಸಿದರು.

ಈ ಬಗ್ಗೆ ನಾನು ಹಾಗೆಯೇ ವಿಚಾರ ಮಂಥನಮಾಡಿದೆ. ಮನಶ್ಶಾಸ್ತ್ರವು ಜೀವನದ ಇತರ ಅಂಶಗಳೊಡನೆ ಬೆರೆತಿರುವುದು ಸಹಜ ಮತ್ತು ಸರಿ ಎಂದು ನನಗೆ ಅನ್ನಿಸಿತು. ಮನುಷ್ಯನ ವಿಚಾರರೀತಿ ಅನುಭವಗಳು ಮತ್ತು ವರ್ತನೆಗಳು ಮಾನವನ ಸಮಗ್ರ ಜೀವನದ ಕೇವಲ ಕೆಲವು ಅಂಶಗಳಾಗಿರುವುದು ಸಹಜ ಎಂದು ನನಗೆ ಭಾಸವಾಯಿತು.

ಬ್ರಹ್ಮರ್ಷಿಗಳು ನನಗೆ ಮನಶ್ಶಾ ಹಲವಾರು ಗ್ರಂಥಗಳಿಂದ ಉದ್ಧರಿಸುವುದು ಬ್ರಹ್ಮರ್ಷಿಗಳ ಪಾಂಡಿತ್ಯ ಮತ್ತು ಬುದ್ಧಿ ಕುಶಲತೆಗೆ ಮತ್ತೊಂದು ನಿದರ್ಶನ. ಅವರು ಅರ್ಥಗಳನ್ನು ವಿವರಿಸಿ ಅವು ಪರಸ್ಪರ ಹೇಗೆ ಹೊಂದಿಕೊಳ್ಳುವುವೆಂಬುದನ್ನು ವಿವರಿಸುವರಲ್ಲದೆ ಅರ್ಥವು ಸುಲಭ ಗ್ರಾಹ್ಯವಾಗುವಂತೆ ಮಾಡಬಲ್ಲರು. ಇದು ಸಾಮಾನ್ಯ ಸಾಧನೆ ಎನ್ನಲಾಗದು. ಮುದ್ರಣವೇ ಆಗಿಲ್ಲದ ಮೂಲ ಗ್ರಂಥಗಳಿಂದ ಉದ್ಧರಿಸುವ ಬ್ರಹ್ಮರ್ಷಿಗಳ ಪಾಂಡಿತ್ಯ ಮತ್ತು ಜ್ಞಾಪಕಶಕ್ತಿಯು ಎಂತಹವರನ್ನೂ ದಂಗು ಬಡಿಸದಿರಲಾರದು.

ಭಾರತದ ಸಂಸ್ಕೃತಿಯ ಪರಂಪರೆಯ ರಕ್ಷಣೆ ಮತ್ತು ಪ್ರಚಾರಗಳಲ್ಲಿ ತೊಡಗಿರುವ ಬ್ರಹ್ಮರ್ಷಿಗಳಿಗೆ ಆಯುರಾರೋಗ್ಯಗಳು ಹೆಚ್ಚಲೆಂದು ಪ್ರಾರ್ಥಿಸುತ್ತೇನೆ.

ಉಪದೇಶ ಮಾಡಲು ಯಾವ ಕೃತಕ ಅಡ್ಡಿಗಳು ಇರಕೂಡದು ಎಂದು ಅವರ ಅಭಿಪ್ರಾಯ.

ದೈವರಾತರ ವೈದಿಕ ಪ್ರಜ್ಞೆ

ಋಗ್ವೇದ, ಯಜುರ್ವೇದ, ಸಾಮವೇದ ಮತ್ತು ಅಥರ್ವವೇದ ಈ ನಾಲ್ಕು ವೇದಗಳೂ ಮುಖೋದ್ಗತವಾದ ಶ್ರೀ ದೈವರಾತ ಮಹನೀಯರಿಗೆ ವೈದಿಕಪ್ರಜ್ಞೆ ಇದೆಯೆಂದು ಹೇಳುವದು ಅವಶ್ಯವಿಲ್ಲ. ಆದರೆ ಮಂತ್ರಗಳ ಪಾಠ ಬರುವದು ಒಂದು ಮಾತು. ಅವುಗಳ ಅರ್ಥವನ್ನು ತಿಳಿಯಾಗಿ ಹೇರುವ ಸಾಮರ್ಥ್ಯ ಇದು ಮಹತ್ವದ್ದು. ಪಾಣಿನಿ ಸೂತ್ರಗಳ ಅನುಸಂಧಾನದಿಂದ, ಯಾಸ್ಕರ ನಿರುಕ್ತಕ್ಕೆ ಹೊಂದುವಂತೆ ತರ್ಕಶುದ್ಧವಾಗಿ ಪ್ರಮಾಣಬದ್ಧವಾಗಿ ಸುಸಂಗತವಾಗಿ ವೇದಗಳ ಮಂತ್ರಾರ್ಥವನ್ನು ವಿಶದೀಕರಿಸಿ ಹೇಳುವದು ಸಾಮಾನ್ಯ ಪ್ರಜ್ಞೆಯಲ್ಲ.

ಶ್ರೀ ದೈವರಾತರು ತಮ್ಮ ಮಗ ಸೋಮಶ್ರವರೊಂದಿಗೆ

★ ★ ★ ★ ★ ★

ಹೊಸ ವೇದಮಂತ್ರಗಳ ದರ್ಶನ

ಸತ್ಯದರ್ಶನೆ

ಪರಮಾರ್ಥದಲ್ಲಿ, ಅಧ್ಯಾತ್ಮ ಕ್ಷೇತ್ರದಲ್ಲಿ ಸಾಕ್ಷಾತ್ಕಾರ ಶಾಸ್ತ್ರದಲ್ಲಿ, ಯಾವುದಕ್ಕೆ ಪಾಶ್ಚಾತ್ಯರು ಸ್ಪಿರಿಚ್ಯುಯಾಲಿಟಿ ಎನ್ನುವರೊ, ನಾವು ಯಾವುದಕ್ಕೆ ಆತ್ಮಾನುಭೂತಿ ಅನ್ನುವೆವೊ ಆ ಕ್ಷೇತ್ರದಲ್ಲಿ ಅಪರೋಕ್ಷಾನುಭೂತಿಗೆ ಅತ್ಯಂತ ಮಹತ್ವವಿರುವದು. ಆ ಪೂರ್ಣಾನುಭವದಿಂದ "ಭಿದ್ಯತೇ ಹೃದಯಗ್ರಂಥಿ ಛಿದ್ಯಂತೇ ಸರ್ವ ಸಂಶಯಾಃ" ಎಂದು ಉಪನಿಷತ್ತು ಹೇಳುವುದು.

ಈ ಬಗೆಯ ಪರಮ ಸತ್ಯದ ಅನುಭವ, ಬ್ರಹ್ಮದರ್ಶನ, ಬ್ರಹ್ಮನಿರ್ವಾಣ ಇವುಗಳ ವರ್ಣನೆ ವೇದ, ಉಪನಿಷತ್ತು ಗೀತೆ, ಸಂತರವಾಣಿ, ದಾಸರ- ಶರಣರ ಭಕ್ತಿ–ಕಾವ್ಯ ಇತ್ಯಾದಿಗಳಲ್ಲಿ ಹೇರಳವಾಗಿ ದೊರೆಯುವದು. ಅವರವರು ಬೇರೆ ಬೇರೆ ಶಬ್ದಗಳಲ್ಲಿ ಆ ಅನುಭವವನ್ನು ಬಣ್ಣಿಸಿರುವರು. ತತ್ತ್ವೇಪಶ್ಯಾಮಿ, ಎಂದು ಒಬ್ಬರು ಹೇಳಿದರೆ, "ವಾಸುದೇವಃ ಸರ್ವಮಿತಿ" ಎಂದು ಇನ್ನೊಬ್ಬರು. 'ಏಕಾತ್ಮ ಪ್ರತ್ಯಯ ಸಾರಂ" ಎಂದು ಒಂದು ವರ್ಣನೆ ಇದ್ದರೆ 'ಲಭಂತೇ ಬ್ರಹ್ಮನಿರ್ವಾಣಂ' ಎಂದು 'ಬ್ರಹ್ಮ ಸಂಸ್ಪರ್ಶ' ಎಂದು ಇನ್ನೊಂದು ವರ್ಣನೆ ಇರುವದು. ಆತ್ಯಂತಿಕ ಸತ್ಯದ ದರ್ಶನದ ವರ್ಣನೆ ಹೀಗೆ ಬಗೆ ಬಗೆಯಾಗಿ ನಮಗೆ ಅಲ್ಲಲ್ಲಿ ಸಿಕ್ಕುವದು.

ಇದೇ ಬ್ರಹ್ಮದರ್ಶನ. ಈ ದರ್ಶನಕ್ಕಾಗಿಯೇ ಆಧ್ಯಾತ್ಮಿಕ ಸಾಧಕರು ಹಗಲಿರುಳೂ ವಿಧವಿಧದ ಸಾಧನಗಳ ಮೂಲಕ, ಉಪಾಸನೆಗಳ ಮೂಲಕ, ಯೋಗಮಾರ್ಗಗಳ ಮೂಲಕ ಯತ್ನಿಸುವರು.

ಶಬ್ದ ಬ್ರಹ್ಮ ದರ್ಶನೆ

ಯಾವ ಜ್ಞಾನದ ಮೂಲಕ, ಯಾವ ಶಬ್ದಗಳ ಮೂಲಕ, ಯಾವ ವೇದ ಮಂತ್ರಗಳ ಮೂಲಕ ಈ ಬ್ರಹ್ಮ ದರ್ಶನ ಎಂಬುದು ಆಗುವುದೊ ಅದೇ ಶಬ್ದ ಬ್ರಹ್ಮ ಎನಿಸುವದು.

ವೇದಗಳೇ ಶಬ್ದಬ್ರಹ್ಮ. ವೇದ ಮಂತ್ರಗಳ ಜ್ಞಾನದಿಂದ ಬ್ರಹ್ಮಜ್ಞಾನ ಬ್ರಹ್ಮದರ್ಶನ ಆಗಬಲ್ಲದು, ಆಗುವದು. ಅದುದರಿಂದಲೆ ಅವುಗಳಿಗೆ ಶಬ್ದ ಬ್ರಹ್ಮ ಎಂಬ ಅಭಿಧಾನ.

ಮಾನವನ ಚಿತ್ತವು ಒಂದು ವ್ಯಕ್ತಿ ವ್ಯಕ್ತಿತ್ವದ ಮರ್ಯಾದೆಯಿಂದ ಸೀಮಿತವಿರುವಾಗ, ಅಹಂಭಾವದಿಂದ ತುಂಬಿರುವಾಗ ಅದರ ಶಕ್ತಿ ಕೂಡ ತೀರ ಸೀಮಿತವಾಗಿಯೇ ಇರುವುದು. ಆದರೆ ಸರ್ವವ್ಯಾಪಿಯಾದ ಚಿದ್‌ಘನದಲ್ಲಿ ಲೀನವಾದ ಅನುಭವವನ್ನು ಅನುಭವಿಸುವಾಗ ಅದು "ಮಹತೋ ಮಹೀಯಾನ್" ಆಗುವುದು. ಆ ಸ್ಥಿತಿಯಲ್ಲಿ ಮಾತ್ರ ವಿಶ್ವಾತ್ಮನ ಸ್ಫೂರ್ತಿ ಆಗಬಲ್ಲದು. ಶಬ್ದಬ್ರಹ್ಮದ ದರ್ಶನವಾಗಬಲ್ಲದು. ಪುರುಷಭಾವ ಮಾಯವಾಗಿ ಅಪೌರುಷೇಯ ಭಾವವು ಸ್ಥಾಪಿತವಾಗುವದು. ಅಂಥ ಚಿತ್ ಸ್ಥಿತಿಯಲ್ಲಿ ಮಂತ್ರದರ್ಶನಾದಿ ವ್ಯಾಪಾರಗಳು ಅಗಾಧವಾಗಿ ಅಮೋಘವಾಗಿ ನಡೆಯುವುವು.

ಶಬ್ದಬ್ರಹ್ಮ ದರ್ಶನ ಎರಡು ಬಗೆ ಇರಬಲ್ಲದೋ ಏನೋ. ಒಂದು ಶ್ರುತಿರೂಪ ಅಂದರೆ ಕಿವಿಯಲ್ಲಿ ಬಂದು ಹೇಳಿದಂತೆ ಇನ್ನೊಂದು ದರ್ಶನ ರೂಪ ಅಂದರೆ ಕಣ್ಣೆದುರು ಪ್ರತ್ಯಕ್ಷ ಬರೆದಿಟ್ಟಂತೆ. ಆದುದರಿಂದ ಮಂತ್ರಗಳನ್ನು ಕಂಡ ಋಷಿಗಳಿಗೆ ಮಂತ್ರ ದ್ರಷ್ಟಾರರು ಎಂಬ ಶಬ್ದವು ರೂಢವಿದೆ. ಅದೇ ಅದನ್ನು ಕೇಳಿ ಹೇಳಿದುದೇ ಶ್ರುತಿ ಅವರೇ ಶ್ರೋತ್ರಿಯರು.

ಶ್ರೀ ದೈವರಾತರಿಗೆ ಅವರ ಎಳೆ ವಯಸ್ಸಿನಲ್ಲಿ ಸಮಾಧಿ ಸ್ಥಿತಿಯಲ್ಲಿ ಮಂತ್ರ ದರ್ಶನವಾದುದನ್ನು ಅವರ ಬಾಯಿಂದ ಬರುವ ಶಬ್ದಗಳು ಮಂತ್ರ ರೂಪ ಇರುವುದನ್ನು ಕೇಳಿ ನೋಡಿ ಅವರ ಗುರುಗಳಾದ ಕಾವ್ಯಕಂಠ ಗಣಪತಿ ಮುನಿಗಳು ಅವುಗಳನ್ನು ಬರೆದುಕೊಂಡರು. ಈ ಕ್ರಮ ಒಂದು ವಿಶಿಷ್ಟ ಸಮಯದಲ್ಲಿ ಹದಿನಾರು ದಿನ ನಡೆಯಿತು. ಸುಮಾರು ೪೨೮ ಸ್ಪಷ್ಟವಾದ ಮಂತ್ರಗಳು–ಋಗ್ವೇದ ಶೈಲಿ ಆವಿರ್ಭವಿಸಿದವು. ಅವುಗಳನ್ನು ಬರೆದುಕೊಂಡು ಅವರ ಗುರುಗಳು ಆನಂದಾಶ್ಚರ್ಯಗಳಿಂದ ತುಂಬಿ ಸುಂದರ ಅನ್ವಯ ಭಾಷ್ಯವನ್ನು ಬರೆದರು.

ಮಂತ್ರ, ಪದಪಾಠ, ಅನ್ವಯಭಾಷ್ಯ ಇಂಗ್ಲೀಷ್ ಭಾಷಾಂತರ ಇವೆಲ್ಲವು ಈಗ ಪುಸ್ತಕ ರೂಪದಿಂದ ಪ್ರಕಟವಾಗಿದೆ. ಆ ಗ್ರಂಥದ ಹೆಸರು 'ಛಂದೋದರ್ಶನ" ಭಾರತೀಯ ವಿದ್ಯಾಭವನದವರು ಪ್ರಕಟಿಸಿರುವರು.

ಆ ಛಂದೋ ದರ್ಶನವನ್ನು ಓದಿ ನೋಡಿಯೇ ಮಹಾ ಮಹೋಪಾಧ್ಯಾಯ ದತ್ತೋ ವಾಮನ ಪೋತದಾರರು ಉದ್ಗರಿಸಿದ್ದೇನೆಂದರೆ ವೇದ ಮಂತ್ರಗಳ ಸಂಹಿತೀಕರಣವಾದ ಎರಡು ಸಾವಿರ ವರುಷಗಳ ನಂತರ ನಾನು ಈ ಋಗ್ವೇದ ಶೈಲಿಯ ಹೊಸ ಮಂತ್ರಗಳನ್ನು ನೋಡುತಲಿದ್ದೇನೆ.

ಇದೇ ಗ್ರಂಥವನ್ನು ನೋಡಿ ಶ್ರೀ ವಿನೋಬಾ ಭಾವೆ ಅವರು, ಹಾ ನವೀನ ಋಗ್ವೇದ ಆಹೆ [ಇದು ಹೊಸ ಮಂತ್ರಗಳುಳ್ಳ ಋಗ್ವೇದವು] ಎಂದು ಮರಾಠಿ ಭಾಷೆಯಲ್ಲಿ ಉದ್ಗರಿಸಿದರು!


ಅಗಾಧ ಪಾಂಡಿತ್ಯ; ಜ್ಞಾಪಕ ಶಕ್ತಿ

ಡಾ|| ಎಸ್. ಎಸ್. ಜಯರಾಂ

ನಾನೊಬ್ಬ ಮನೋರೋಗದ ವೈದ್ಯ ನಾನು ಬ್ರಹ್ಮರ್ಷಿ ದೈವರಾತರನ್ನು ಮೊದಲು ಭೇಟಿಮಾಡಿದುದು ನನ್ನ ವೃತ್ತಿಯ ಸಂಬಂಧದಲ್ಲಿ.

ನಾನು ಮನೋರೋಗ ಚಿಕಿತ್ಸೆಯಲ್ಲಿ ಬೋಧೆ ಮತ್ತು ತರಬೇತಿ ಪಡೆದುದು ಪಾಶ್ಚಾತ್ಯ ದೇಶಗಳಲ್ಲಿ ಪಾಶ್ಚಾತ್ಯ ಸಂಸ್ಕೃತಿಯಿಂದ ಪಡೆದ ಭಾವನೆಗಳು ಮತ್ತು ತರಬೇತಿ ಭಾರತಕ್ಕೆ ಸರಿಹೊಂದುವುದಿಲ್ಲ. ನಮ್ಮ ಭಾಷೆಯ ಮತ್ತು ಜೀವನ ವಿಧಾನಗಳ ಉತ್ತಮ ಅಂಶಗಳನ್ನು ಕಲಿಯುವುದು ಅಗತ್ಯ ಎಂದು ನನಗೆ ಅನ್ನಿಸಿತು. ಇಂದು ನಮ್ಮ ಮಧ್ಯೆ ಇರುವ ಅನೇಕ ಮಾನವೀಯ ಸಮಸ್ಯೆಗಳು ಅನಾದಿ ಕಾಲದಿಂದಲೂ ಇರುವುವು. ಅವುಗಳನ್ನು ನಮ್ಮ ಹಿರಿಯರು ವಾಸ್ತವಿಕ ಅನುಭವಗಳ ಆಧಾರದ ಮೇಲೆ ಬಗೆಹರಿಸುತ್ತಿದ್ದರು. ಪ್ರಾಚೀನ ಕಾಲದಲ್ಲಿ ಮನುಷ್ಯರ ವಿಚಾರ ರೀತಿ, ಅನುಭವಗಳು ಮತ್ತು ವರ್ತನೆಗಳನ್ನು ಅರ್ಥ ಮಾಡಿಕೊಳ್ಳಲು ಭಾರತೀಯರು ಅನುಸರಿಸುತ್ತಿದ್ದ ವಿಧಾನಗಳನ್ನು ತಿಳಿಯಲು ನಾನು ಪ್ರಯತ್ನಿಸುತ್ತಿದ್ದೆ. ಅವುಗಳನ್ನು ತಿಳಿಸುವ ಮೂಲಗಳಿಗಾಗಿ ಹುಡುಕಾಡುತ್ತಿದ್ದೆ. ಈ ಮೂಲಗಳು ವೇದಗಳು, ಉಪನಿಷತ್ತುಗಳು ಗೀತ ಮತ್ತು ಇತರ ಭಾರತೀಯ ಶಾಸ್ತ್ರಗಳು ಎಂಬುದು ನನಗೆ ತಿಳಿಯಿತು. ನನ್ನ ಸನ್ಮಿತ್ರರಾದ ಶ್ರೀ ಆರ್. ಆರ್. ದಿವಾಕರರು ಬ್ರಹ್ಮರ್ಷಿ ದೈವರಾತರಿಗೆ ನನ್ನನ್ನು ಪರಿಚಯ ಮಾಡಿಸಿಕೊಟ್ಟರು. ಬ್ರಹ್ಮರ್ಷಿ ದೈವರಾತರು ವೇದ, ಉಪನಿಷತ್ತು. ಶಾಸ್ತ್ರಗಳ ಬಗ್ಗೆ ತಿಳಿಸಬಲ್ಲ ಜ್ಞಾನದ ಚಿಲುಮೆಯಾಗಿರುವರು.

ಇದಾದನಂತರ ಬ್ರಹ್ಮರ್ಷಿ ದೈವತಾರರನ್ನು ನಾನು ಹಲವಾರು ಸಲ ಭೇಟಿ ಮಾಡಿದೆ. ಬ್ರಹ್ಮರ್ಷಿಗಳು ಅವರಿಗಾಗಿರುವ ವಯಸ್ಸಿಗಿಂತಲೂ ಚಿಕ್ಕವರಾಗಿ ಕಾಣುವರು, ಅವರು ಪದ್ಮಾಸನದಲ್ಲಿ ಕೂಡುವರು ಮತ್ತು ಅವರ ನಡಿಗೆಯಲ್ಲಿ ಚುರುಕು ಕಾಣಬಹುದು. ಅವರ ಧ್ವನಿ ಮತ್ತು ಕಂಠ ಸ್ಪಷ್ಟ ಮತ್ತು ಕಂಚಿನಂತಿದೆ. ಅವರ ಸ್ವರ, ರಾಗಗಳು ಛಂದೋಬದ್ಧವಾಗಿವೆ.



ಶ್ರೀ ದೈವರಾತರ ಬರಹವು ತುಂಬಾ ಚೊಕ್ಕ ಹಾಗೂ ಅಚ್ಚುಕಟ್ಟಾದುದು. ಸಂಸ್ಕೃತ ಭಾಷೆ, ಆ ಭಾಷೆಯಲ್ಲಿ ಗದ್ಯ ಪದ್ಯ ರಚನೆ ಹಾಗೂ ಭಾಷಣ ಅವರಿಗೆ ಕರತಲಾಮಕ.

ಮನೋವಿಜ್ಞಾನದ ಬಗ್ಗೆ ಮತ್ತು ನಮ್ಮ ಶಾಸ್ತ್ರಗಳಲ್ಲಿ ವಿವರಿಸಿರುವ ಮನುಷ್ಯರ ವರ್ತನೆಯ ಬಗ್ಗೆ ವಿವರಿಸುವಂತೆ ಬ್ರಹ್ಮರ್ಷಿಗಳನ್ನು ನಾನು ಕೇಳಿಕೊಂಡೆ. ಬ್ರಹ್ಮರ್ಷಿಗಳು ಸ್ವಲ್ಪಹೊತ್ತು ಯೋಚನಾಮಗ್ನರಾಗಿದ್ದರು. ಮನಶಾಸ್ತ್ರವನ್ನು ವಿವರಿಸುವ ಯಾವ ಒಂದು ಗ್ರಂಥ ಅಥವಾ ಒಂದು ಅಧ್ಯಾಯ ಇಲ್ಲ ಎಂದು ಅವರು ನುಡಿದರು. ಮನಶ್ಶಾಸ್ತ್ರದ ಬಗೆಗಿನ ವಿಷಯವು ಹಲವಾರು ಗ್ರಂಥಗಳಲ್ಲಿ ಚದುರಿಹೋಗಿದೆ ಎಂದು ಬ್ರಹ್ಮರ್ಷಿಗಳು ಹೇಳಿದರು. ಮತ್ತು ಮನಶ್ಶಾಸ್ತ್ರವೇ ಪ್ರತ್ಯೇಕವಾಗಿರದೆ ಸಮಗ್ರ ಜೀವನದ ಮಾನವೀಯ, ಮತೀಯ ಮುಂತಾದ ಅಂಶಗಳೊಡನೆ ಹಾಸುಹೊಕ್ಕಾಗಿ ಬೆರೆತಿದೆ ಎಂಬ ಅಂಶವನ್ನೂ ಬ್ರಹ್ಮರ್ಷಿಗಳು ತಿಳಿಸಿದರು.

ಈ ಬಗ್ಗೆ ನಾನು ಹಾಗೆಯೇ ವಿಚಾರ ಮಂಥನಮಾಡಿದೆ ಮನಶ್ಶಾಸ್ತ್ರವು ಜೀವನದ ಇತರ ಅಂಶಗಳೊಡನೆ ಬೆರೆತಿರುವುದು ಸಹಜ ಮತ್ತು ಸರಿ ಎಂದು ನನಗೆ ಅನ್ನಿಸಿತು ಮನುಷ್ಯನ ವಿಚಾರ ರೀತಿ ಅನುಭವಗಳು ಮತ್ತು ವರ್ತನೆಗಳು ಮಾನವನ ಸಮಗ್ರ ಜೀವನದ ಕೇವಲ ಕೆಲವು ಅಂಶಗಳಾಗಿರುವುದು ಸಹಜ ಎಂದು ನನಗೆ ಭಾಸವಾಯಿತು.

ಬ್ರಹ್ಮರ್ಷಿಗಳು ನನಗೆ ಮನಶ್ಶಾಸ್ತ್ರದ ಬಗೆ ತಿಳಿಸಲು ಋಗ್ವೇದದಿಂದ ಶ್ಲೋಕ ಮತ್ತು ಪದ್ಯಗಳನ್ನು ಹೇಳಲಾರಂಭಿಸಿದರು. "ಒಂದು ನಿಮಿಷ ತಡೆಯಿರಿ" ಎಂದವರೇ ಉಪನಿಷತ್ತುಗಳಿಂದ ಉಲ್ಲೇಖಿಸಲಾರಂಭಿಸಿದರು. ಇತರ ಕೆಲವು ಮೂಲಗಳಿಂದಲೂ ಅವರು ಇವುಗಳಿಗೆ ಸಂಬಂಧಿಸಿದಂತೆ ಉದ್ಧರಿಸಿದರು. ಬ್ರಹ್ಮರ್ಷಿಗಳ ಅಪಾರ ಪಾಂಡಿತ್ಯ ಮತ್ತು ಅಸಾಧಾರಣ ಜ್ಞಾಪಕಶಕ್ತಿಗೆ ಇದಕ್ಕಿಂತಲೂ ಬೇರೆ ಸಾಕ್ಷ್ಯ ಬೇಕಾಗಿಲ್ಲ.

ಒಂದು ವಿಷಯಕ್ಕೆ ಸಂಬಂಧಿಸಿದಂತೆ ಹಲವಾರು ಗ್ರಂಥಗಳಿಂದ ಉದ್ಧರಿಸುವುದು ಬ್ರಹ್ಮರ್ಷಿಗಳ ಪಾಂಡಿತ್ಯ ಮತ್ತು ಬುದ್ಧಿ ಕುಶಲತೆಗೆ ಮತ್ತೊಂದು ನಿದರ್ಶನ. ಅವರು ಅರ್ಥಗಳನ್ನು ವಿವರಿಸಿ ಅವು ಪರಸ್ಪರ ಹೇಗೆ ಹೊಂದಿಕೊಳ್ಳುವುವೆಂಬುದನ್ನು ವಿವರಿಸುವರಲ್ಲದೆ ಅರ್ಥವು ಸುಲಭ ಗ್ರಾಹ್ಯವಾಗುವಂತೆ ಮಾಡಬಲ್ಲರು. ಇದು ಸಾಮಾನ್ಯ ಸಾಧನೆ ಎನ್ನಲಾಗದು. ಮುದ್ರಣವೇ ಆಗಿಲ್ಲದ ಮೂಲ ಗ್ರಂಥಗಳಿಂದ ಉದ್ಧರಿಸುವ ಬ್ರಹ್ಮರ್ಷಿಗಳ ಪಾಂಡಿತ್ಯ ಮತ್ತು ಜ್ಞಾಪಕಶಕ್ತಿಯು ಎಂತಹವರನ್ನೂ ದಂಗು ಬಡಿಸದಿರಲಾರದು.

ಭಾರತದ ಸಂಸ್ಕೃತಿಯ ಪರಂಪರೆಯ ರಕ್ಷಣೆ ಮತ್ತು ಪ್ರಚಾರಗಳಲ್ಲಿ ತೊಡಗಿರುವ ಬ್ರಹ್ಮರ್ಷಿಗಳಿಗೆ ಆಯುರಾರೋಗ್ಯಗಳು ಹೆಚ್ಚಲೆಂದು ಪ್ರಾರ್ಥಿಸುತ್ತೇನೆ.

ಶ್ರೀ ದೈವರಾತರ ಆಧುನಿಕತೆ

ಗೋಕರ್ಣ ಕ್ಷೇತ್ರವು ದಕ್ಷಿಣ ಕಾಶಿ ಎನಿಸಿಕೊಂಡಿದೆ. ಮಹಾಬಲೇಶ್ವರ ದೇವಸ್ಥಾನವು ಸಾಕಷ್ಟು ಪ್ರಸಿದ್ಧಿ ಇದೆ. ಇದರ ಬಗ್ಗೆ ಒಂದು ಪುರಾಣೋಕ್ತ ಕಥೆ ಇದೆ. ರಾವಣನು ಕಠೋರ ತಪಸ್ಸು ಮಾಡಿ ಈಶ್ವರನಿಂದ ಆತ್ಮಲಿಂಗವನ್ನು ಪಡೆದನು. ಆ ಆತ್ಮಲಿಂಗವೇ ಇಲ್ಲಿ ಸ್ಥಾಪನೆ ಆಗಿದೆ. ಎಂದು ಐತಿಹ್ಯ ಇದೆ.

ಶ್ರೀ ದೈವರಾತರು ಗೋಕರ್ಣದಲ್ಲಿ ಅಶೋಕವನ ಎಂಬಲ್ಲಿ ಋಷಿಕುಲ ಯೋಗಾಶ್ರಮದಲ್ಲಿ ವಾಸಿಸುವರು. ಕೃಷಿ ಹಾಗೂ ಗೋರಕ್ಷಣ ಒಡನೆ ವೇದ ಯೋಗ ಇವುಗಳ ಅನುಷ್ಠಾನ ಇದೇ ಅವರ ವೃತ್ತಿ. ಮನೆಯಲ್ಲಿ ಅಗ್ನಿಹೋತ್ರ ಇದೆ. ವೈದಿಕ ಆಚಾರ ವಿಚಾರಗಳ ದೃಷ್ಟಿಯಿಂದ, ನಿತ್ಯ ಕರ್ಮಾದಿಗಳ ಪಾಲನೆಯಿಂದ ದೇವ ಧರ್ಮಗಳಲ್ಲಿರುವ ಅವರ ಶ್ರದ್ಧೆಯಿಂದ ಅವರು ಆದರ್ಶ ವೈದಿಕರು ಎಂದು ಹೇಳಲು ಅಡ್ಡಿಯಿಲ್ಲ.

ಅದೇ ಕಾಲಕ್ಕೆ ಅವರ ವಿಚಾರಗಳಲ್ಲಿ ಅತ್ಯಂತ ಆಧುನಿಕತೆ ಕಂಡು ಬರುವದು. ಅವರು ಗೋಕರ್ಣದಲ್ಲಿ ಇಲ್ಲದಿರುವಾಗ ಅವರ ಸಹಧರ್ಮಿಣಿ ಶ್ರದ್ಧಾದೇವಿಯವರು ಅಗ್ನಿಹೋತ್ರವನ್ನು ನಡೆಸಿಕೊಂಡು ಹೋಗುವರು. ಮಕ್ಕಳಿಗೆ ಆಸನಾದಿಗಳನ್ನು ಹೇಳಿಕೊಡುವರು. ಸ್ತ್ರೀಯರಿಗೆ ವೇದಾಧಿಕಾರ ಇರುವುದಲ್ಲದೆ

ಅವರ ಉಪನಯನವಾಗಬೇಕು ಹಾಗೂ ಅವರಿಗೆ ಬ್ರಹ್ಮೋಪದೇಶ ಅವಶ್ಯ ಎಂದು ಅವರು ಪ್ರತಿಪಾದಿಸುವರು.

ಅವರು ನಿತ್ಯ ಡೈರಿ ಬರೆಯುತಿರುವರು. ಆದರೆ ಅದು ಸಂಸ್ಕೃತದಲ್ಲಿ!

ಜಾತಿ, ಪಂಥ, ಕುಲ ಇತ್ಯಾದಿಗಳನ್ನು ಲಕ್ಷಕ್ಕೆ ತರದೆ ಅವರು ಎಲ್ಲರೊಡನೆ ಸಹಜ ಭಾವದಿಂದ ವರ್ತಿಸುವರು. ಸನಾತನ ಧರ್ಮಿ ಎನಿಸಿಕೊಳ್ಳುವ ಎಲ್ಲ ಹಿಂದುಗಳಿಗೆ ಗಾಯತ್ರಿ ಮಂತ್ರದ ಉಪದೇಶ ಮಾಡಲು ಯಾವ ಕೃತಕ ಅಡಿಗಳು ಇರಕೂಡದು ಎಂದು ಅವರ ಅಭಿಪ್ರಾಯ.

ದೈವರಾತರ ವೈದಿಕ ಪ್ರಜ್ಞೆ

ಋಗ್ವೇದ, ಯಜುರ್ವೇದ, ಸಾಮವೇದ ಮತ್ತು ಅಥರ್ವವೇದ ಈ ನಾಲ್ಕು ವೇದಗಳೂ ಮುಖೋದ್ಗತವಾದ ಶ್ರೀ ದೈವರಾತ ಮಹರ್ಷಿಯರಿಗೆ ವೈದಿಕಪ್ರಜ್ಞೆ ಇದೆಯೆಂದು ಹೇಳುವದು ಅವಶ್ಯವಿಲ್ಲ. ಆದರೆ ಮಂತ್ರಗಳ ಪಾಠ ಬರುವದು ಒಂದು ಮಾತು. ಅವುಗಳ ಅರ್ಥವನ್ನು ತಿಳಿಯಾಗಿ ಹೇಳುವ ಸಾಮರ್ಥ್ಯ ಇದು ಮಹತ್ವದ್ದು. ಪಾಣಿನಿ ಸೂತ್ರಗಳ ಅನುಸಂಧಾನದಿಂದ, ಯಾಸ್ಕರ ನಿರುಕ್ತಕ್ಕೆ ಹೊಂದುವಂತೆ ತರ್ಕಶುದ್ಧವಾಗಿ ಪ್ರಮಾಣಬದ್ಧವಾಗಿ ಸುಸಂಗತವಾಗಿ ವೇದಗಳ ಮಂತ್ರಾರ್ಥವನ್ನು ವಿಶದೀಕರಿಸಿ ಹೇಳುವದು ಸಾಮಾನ್ಯ ಪ್ರಜ್ಞೆಯುಲ್ಲ.